ಬಂದಿದ್ದಾರೆ. ಮಳೆ ಬರಬೇಕಾದರೆ ದಟ್ಟವಾದ, ಮತ್ತು ಹೆಚ್ಚು ಹೆಚ್ಚು ಕಾಡು ಇರಬೇಕೆಂದು ವೈಜ್ಞಾನಿಕವಾಗಿ ಕೂಡ ರುಜುವಾತಾಗಿದೆ. ಹಿಂದೆ ಅರಣ್ಯ ಖಾತೆಯ ಸಚಿವರಾಗಿದ್ದ ಶ್ರೀಮಾನ್ ರಾಚಯ್ಯನವರಿಗೆ ಈ ವಿಚಾರದಲ್ಲಿ ನಾನು ಕಾಗದವನ್ನು ಕೂಡ ಬರೆದಿದ್ದೇನೆ, ಹೇಳಿದ್ದೇನೆ. ಆದರೂ ಸಹ ಅವರು ಕೇಳಲಿಲ್ಲ. ಇದ್ದಂತಹ ಕಾಡನ್ನೆಲ್ಲಾ ಕಡಿದು ಅದರ ಜಾಗದಲ್ಲಿ ಗಿಡಗಳನ್ನು, ಬೀಜಗಳನ್ನು ನೆಡುವುದಕ್ಕೆ ಪ್ರಾರಂಭ ಮಾಡಿದರು. ಈ ರೀತಿ ಕಾಡನ್ನು ಕಡಿದು ಹಾಳುಮಾಡಿ ಮಳೆ ಬಾರದೆ ಇಂಥಾ ಒಂದು ಅಭಾವ ಪರಿಸ್ಥಿತಿ ಉಂಟಾಗುವುದಕ್ಕೆ ಸರ್ಕಾರದವರೇ ಕಾರಣ. ಹೀಗೆ ಇದ್ದಂತಹ ಕಾಡನ್ನೆಲ್ಲಾ ಕಡಿದು, ಮಳೆ ಬಾರದ ಹಾಗೆ ಮಾಡಿಕೊಂಡು ಅಮೆರಿಕಾ, ರಷ್ಯಾ ಮುಂತಾದ ದೇಶಗಳಿಂದ ಸಾಲ ತಂದು ಭಾರಿ ಭಾರಿ ಅಣೆಕಟ್ಟುಗಳನ್ನು ಕಟ್ಟಿದ್ದಾರೆ. ಆದರೆ ಆ ಅಣೆಕಟ್ಟುಗಳಲ್ಲಿ ನೀರು ಶೇಖರಣೆ ಮಾಡುತ್ತಿಲ್ಲ. ಅಷ್ಟೊಂದು ಭಾರಿ ಮೊತ್ತದ ಹಣವನ್ನು, ಸಾಲವನ್ನು ಇವೊತ್ತು ಸರ್ಕಾರದವರು ಹೇಗೆ ಪಾವತಿ ಮಾಡುತ್ತಾರೆ? ಸರ್ಕಾರದವರು ಇಷ್ಟೊಂದು ಹಣವನ್ನು ಖರ್ಚು ಮಾಡಿದ್ದರೂ ಕೂಡ ಕ್ಷಾಮ ಪರಿಸ್ಥಿತಿ ಬಂದಾಗ ಅದನ್ನು ಪರಿಹರಿಸುವುದಕ್ಕೆ ಏನು ಯೋಜನೆ ಮಾಡಿದ್ದಾರೆ ಎನ್ನುವುದು ನಮ್ಮ ಮುಂದೆ ಇಲ್ಲ. ಬಿಹಾರದಲ್ಲಿ ಸಂಯುಕ್ತ ರಂಗ ಸರ್ಕಾರ ಬಂದಮೇಲೆ ಆ ರಾಜ್ಯದಲ್ಲಿ ಕ್ಷಾಮ ಬಂದಾಗ ಸರ್ಕಾರದವರು ಅಂಡರ್‌ಗ್ರೌಂಡ್ ವಾಟರ್ ಅನ್ನು ಮೇಲಕ್ಕೆ ತರುವುದಕ್ಕೆ ಪ್ರಯತ್ನ ಮಾಡಿದ್ದಾರೆ. ನೂರಾರು ಭಾರಿ ಭಾರಿ ಯಂತ್ರಗಳನ್ನು ತರಿಸಿ ಬೋರ್‌ವೆಲ್ ಮೆಷಿನ್‌ಗಳನ್ನು ತರಿಸಿ, ಸಾವಿರಾರು ಬಾವಿಗಳನ್ನು ತೋಡಿಸಿದ್ದಾರೆ. ಬಾವಿಗಳಿಂದ ಸಾಕಷ್ಟು ನೀರನ್ನು ಎತ್ತಿ ಜನಗಳಿಗೆ ಬೇಕಾದಷ್ಟು ಅನುಕೂಲತೆಗಳನ್ನು ಮಾಡಿಕೊಟ್ಟಿದ್ದಾರೆ. ಹಣಕಾಸಿನ ವಿಷಯದಲ್ಲಿ ತಮ್ಮ ತಮ್ಮ ಶಕ್ತಿ ಇದ್ದಷ್ಟು ಕೂಡಿಸಿಕೊಂಡು ಅದರ ಜೊತೆಗೆ ಕೇಂದ್ರ ಸರ್ಕಾರದಿಂದಲೂ ಹಣವನ್ನು ಪಡೆದುಕೊಂಡು ಅಂಡರ್-ಗ್ರೌಂಡ್‌ನಲ್ಲಿರತಕ್ಕ ನೀರನ್ನು ಮೇಲಕ್ಕೆ ಎತ್ತಿ ಜನಗಳಿಗೆ ನೀರಾವರಿ ಸೌಲಭ್ಯಗಳನ್ನು ಒದಗಿಸಿಕೊಟ್ಟಿದ್ದಾರೆ. ನಮ್ಮ ರಾಜ್ಯ ಸರ್ಕಾರದವರು ಅಣೆಕಟ್ಟುಗಳನ್ನು ಕಟ್ಟುವುದಕ್ಕೆ ಹಣವನ್ನು ವ್ಯಯ ಮಾಡಿದ್ದಾರೆಯೇ ಹೊರತು. ಬಂಗಾಳದಲ್ಲಿ ಮಾಡಿದಹಾಗೆ ಅಂಡರ್‌ಗ್ರೌಂಡ್‌ನಲ್ಲಿರತಕ್ಕ ನೀರನ್ನು ಮೇಲಕ್ಕೆ ಎತ್ತಿ ಇಂಥಾ ಕ್ಷಾಮ ಪರಿಸ್ಥಿತಿ ಬಂದಾಗ ಜನಗಳಿಗೆ ನೀರನ್ನು ಒದಗಿಸತಕ್ಕ ಒಂದು ಯೋಜನೆಯನ್ನು ಮಾಡಿಲ್ಲ. ನಮ್ಮ ರಾಜ್ಯ ಸರ್ಕಾರದವರು ಸಾಕಷ್ಟು ಹಣವನ್ನು ಒದಗಿಸಿಕೊಂಡು ಭೂಮಿಯಲ್ಲಿ ಇರತಕ್ಕ ನೀರನ್ನು ಮೇಲಕ್ಕೆ ಎತ್ತಿ ಜನಗಳಿಗೆ ನೀರನ್ನು ಒದಗಿಸತಕ್ಕ ಒಂದು ಯೋಜನೆಯನ್ನು ಕೈಗೊಂಡಿದ್ದರೆ ಇಂಥಾ ಕ್ಷಾಮ ಪರಿಸ್ಥಿತಿಯನ್ನು ಸುಲಭವಾಗಿ ಎದುರಿಸಬಹುದಾಗಿತ್ತು. ಅಂಥಾ ಒಂದು ಕಾರ್ಯವನ್ನು ಸರ್ಕಾರದವರು ಜವಾಬ್ದಾರಿಯಿಂದ ಮಾಡದೆ ಉತ್ತರ ಕೊಡುವುದಕ್ಕೆ ಅಸಮರ್ಥರಾಗಿ ಇವೊತ್ತು ಈ ಸಭೆಯಲ್ಲಿ ಕುಳಿತುಕೊಂಡಿದ್ದಾರೆ. ಇವೊತ್ತು ದೇಶದಲ್ಲಿ ಮಳೆ ಬೆಳೆಗಳಾಗದೆ ಅಭಾವ ಪರಿಸ್ಥಿತಿ ಉಂಟಾಗಿ ಜನಗಳಿಗೆ ಕುಡಿಯುವುದಕ್ಕೆ ನೀರು ಇಲ್ಲ, ತಿನ್ನುವುದಕ್ಕೆ ಆಹಾರವಿಲ್ಲ, ದನಕರುಗಳಿಗೆ ಮೇವು ಇಲ್ಲ, ಇಂಥಾ ಒಂದು ಪರಿಸ್ಥಿತಿ ಉದ್ಭವವಾಗಿದೆ. ಅದಕ್ಕೋಸ್ಕರ ನಾನಾದರೂ ಹೇಳುವುದು ಇಷ್ಟೆ ಸರ್ಕಾರದವರು ಭೂಮಿಯ ಒಳಗಡೆ ಇರತಕ್ಕ ನೀರನ್ನು ಮೇಲಕ್ಕೆ ಎತ್ತಿ ಜನಗಳಿಗೆ ನೀರನ್ನು ಒದಗಿಸುವುದಕ್ಕೋಸ್ಕರ ಬೋರ್ ವೆಲ್‌ಗಳನ್ನು ಹಾಕಿ ಅದರ ಮುಖಾಂತರ ಈ ಒಂದು ಪರಿಸ್ಥಿತಿಯನ್ನು ಬಗೆಹರಿಸಬಹುದಾಗಿತ್ತು. ಕಾಂಗ್ರೆಸ್ ಸರ್ಕಾರದ 20 ವರ್ಷಗಳ ಆಡಳಿತದಲ್ಲಿ ಈ ಪ್ರಶ್ನೆಯ ಬಗ್ಗೆ ಸರ್ಕಾರದವರು ಗಮನ ಕೊಟ್ಟಿಲ್ಲ ಎಂದು ನಾವು ನಿಸ್ಸಂದೇಹವಾಗಿ ಹೇಳಬಹುದು. ಈ ಬಗ್ಗೆ ಸರ್ಕಾರದವರು ಯೋಚನೆ ಮಾಡಬೇಕು ಇವೊತ್ತು ನಮ್ಮ ದೇಶದಲ್ಲಿ ಎಲ್ಲಿ ಅಭಾವ ಸರಿಸ್ಥಿತಿ ಇದೆಯೆಂದು ಕೇಳಿದರೆ ಮೈಸೂರಿನಲ್ಲಿ ಅಭಾವ ಪರಿಸ್ಥಿತಿ ಇದೆಯೆಂದು ಹೇಳಬಹುದು. ಇವೊತ್ತು ಕೇಂದ್ರ ಸರ್ಕಾರದವರು ದೇಶದಲ್ಲಿ ಅಭಾವ ಪರಿಹಾರ ಕಾಮಗಾರಿಗಳನ್ನು ತೆಗೆದುಕೊಳ್ಳುವುದಕ್ಕೆ, ಮಂಜೂರು ಮಾಡಿದರೆ ಅದನ್ನು ನೀವು ಯಾರ ಕೈಯಲ್ಲಿ ಕೊಡುತ್ತೀರಾ? ಅದನ್ನು ಅಧಿಕಾರಿಗಳ ಕೈಯಲ್ಲಿ ಕೊಟ್ಟು ಕೂರಿಸುತ್ತೀರಿ, ಅಧಿಕಾರಿಗಳನ್ನು ನಂಬಿ ಅಭಾವ ಪರಿಹಾರ ಕಾಮಗಾರಿಗಳನ್ನು ಮಾಡುವುದಕ್ಕೆ ಅವರಿಗೆ ವಹಿಸಿ ಅಧಿಕಾರವನ್ನು ಕೊಡುತ್ತೀರಿ. ಮಾನ್ಯ ಮಂತ್ರಿಗಳೆಲ್ಲರಿಗೂ ಗೊತ್ತಿದೆ, ಎಲ್ಲೋ ಕೆಲವು ಅಧಿಕಾರಿಗಳನ್ನು ಬಿಟ್ಟರೆ ಬಹಳ ಜನ ಅಧಿಕಾರಿಗಳು ಭ್ರಷ್ಟಾಚಾರಿಗಳಾಗಿದ್ದಾರೆ. ಅಧಿಕಾರಿಗಳಲ್ಲಿ ಭ್ರಷ್ಟಾಚಾರ ತುಂಬಿ ತುಳುಕಾಡುತ್ತಿದೆ. ಅಧಿಕಾರಿಗಳಲ್ಲಿ ಬಹಳ ಜನ ಲಂಚಕೋರರಾಗಿದ್ದಾರೆ. ಇಂಥಾ ವ್ಯಕ್ತಿಗಳ ಕೈಯಲ್ಲಿ ಹಣವನ್ನು ಕೊಟ್ಟರೆ, ಕಾಳಸಂತೆಕೋರರ ಕೈಯಲ್ಲಿ ಹಣವನ್ನು ಕೊಟ್ಟಹಾಗೆ ಆಗುತ್ತದೆ. ನಾವು ಚರಿತ್ರೆಯಲ್ಲಿ ಓದಿರುವ ಹಾಗೆ ಎರಡನೇ ಮಹಾಯುದ್ಧದ ಸಮಯದಲ್ಲಿ ಜನತೆ ಯಾವ ರೀತಿ ಸಾವು ನೋವುಗಳಿಗೆ ತುತ್ತಾಗಿ ತೊಂದರೆಯನ್ನು ಅನುಭವಿಸಿದರೋ ಆ ರೀತಿ ಜನಗಳು ತೊಂದರೆಯನ್ನು ಅನುಭವಿಸಬೇಕಾಗುತ್ತದೆ. ಇವೊತ್ತು ಜನರು ಸರ್ಕಾರದಿಂದ ಯಾವ ಒಂದು ಸಹಾಯವನ್ನು ನಿರೀಕ್ಷಣೆ ಮಾಡಿದ್ದಾರೆಯೋ ಅದು

ಅವರಿಂದ ದೊರೆಯುವುದಿಲ್ಲ. ಸರ್ಕಾರದವರು ಇವೊತ್ತು ಕಾಳಸಂತೆಕೋರರಿಗೆ ಯಾವ ವಿಧಿ ನಿಷೇಧಗಳನ್ನು ಹಾಕಿದರೂ ಕೂಡ ಅವರು ಯಾವ ರೀತಿ ಹಣವನ್ನು ಶೇಖರಣೆ ಮಾಡುತ್ತಿದ್ದಾರೆಯೊ ಆ ರೀತಿ ಅಧಿಕಾರಿಗಳು ಲಂಚರುಷವತ್ತುಗಳಿಂದ ಹಣವನ್ನು ಶೇಖರಣೆ ಮಾಡುತ್ತಿದ್ದಾರೆ ಕ್ಷಾಮ ಪರಿಸ್ಥಿತಿ ಬಗ್ಗೆ ಇಲ್ಲಿ ನಾವು ಜಾಸ್ತಿ ಕೊಡಬೇಕು ಎಂದು ಚರ್ಚೆ ಮಾಡುತ್ತಿದ್ದೇನೆ. ಹಾಗೆ ಜಾಸ್ತಿ ಮಾಡಿಕೊಡುವ ಹಣವನ್ನು ಸರಿಯಾದವರಿಗೆ ಕೊಡದೇ ಹೋದರೆ ಕಾಳಸಂತೆಕೋರರಿಗೆ ಅನುಕೂಲವಾಗುತ್ತದೆ. ಕಾಳಸಂತೆಕೋರರು ಇದಕ್ಕಾಗಿ ಕಾಯುತ್ತಿರುತ್ತಾರೆ. ಆದುದರಿಂದ ಇಂತಹ ಕಾಳಸಂತೆಕೋರರಿಗೆ ಅನುಕೂಲವಾಗುವಂತೆ ಹಣ ಕೊಡಬೇಡಿ, ನೀವು ಕೊಡುವ ಹಣ ಬಡ ಜನತೆಗೆ ಮುಟ್ಟುವಂತೆ ಮಾಡಬೇಕು ಎಂದು ಇಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಇದರಿಂದ ಬಡವನ ಹೊಟ್ಟೆಗೆ ಸ್ವಲ್ಪ ಆಹಾರ ಸಿಗುತ್ತದೆ ಮತ್ತು ದನಗಳಿಗೆ ಮೇವು ಸಿಗುತ್ತದೆ ಮತ್ತು ನೀರು ಕುಡಿಯಲು ಸಿಗುತ್ತದೆ. ಈಗೇನೋ ಐದು ಕೋಟಿಯಷ್ಟು ಹಣವನ್ನು ಮಂಜೂರು ಮಾಡಬಹುದು. ಆದರೆ ಅದನ್ನು ಯಾರ ಮೂಲಕ ಹಂಚಬೇಕೆಂದು ನಿಗದಿ ಮಾಡುತ್ತೀರೋ ಅವರು ಸರಿಯಾಗಿ ಶೀಘ್ರವಾಗಿ ಮಾಡದೆ ಕಾಳಸಂತೆಕೋರರಿಗೆ ಬಲಿಯಾಗುತ್ತಾರೆ. ಇಂದು ನ್ಯಾಯವಾಗಿ ಕೆಲಸ ಮಾಡುತ್ತಿಲ್ಲ. ಸಮಾಜದಲ್ಲಿ ಶೋಷಣೆ ಮಾಡುವ ವರ್ಗದವರೇ ಹೆಚ್ಚಾಗಿದ್ದಾರೆ. ಇದರಿಂದ ಬಡವರು ಇನ್ನೂ ಹೆಚ್ಚು ಬಡವರಾಗುತ್ತಲಿದ್ದಾರೆ, ಬಲ್ಲವರು ಇನ್ನೂ ಹೆಚ್ಚು ಶ್ರೀಮಂತರಾಗುತ್ತಿರುತ್ತಾರೆ; ಇದರ ಕಡೆಗೆ ಸರಕಾರ ಪೂರ್ಣ ಲಕ್ಷ ಕೊಡಬೇಕೆಂದು ಹೇಳುತ್ತೇನೆ.

12-00 NOON

ಇನ್ನು ನಮ್ಮ ಶಿವಮೊಗ್ಗ ಜಿಲ್ಲೆಯನ್ನೇ ಉದಾಹರಣೆಯಾಗಿ ತೆಗೆದುಕೊಂಡರೆ ಇದಕ್ಕೆ ಭತ್ತದ ಕಣಜ ಎಂದು ಹೆಸರು ಕೊಟ್ಟಿದ್ದಾರೆ. ಇದೇ ರೀತಿ ಚಿಕ್ಕಮಗಳೂರು ಕೂಡ ಮಲೆನಾಡು ಪ್ರದೇಶ. ಸ್ವಾತಂತ್ರ್ಯ ಬಂದಮೇಲೆ ಕಾಂಗ್ರೆಸ್ಸು ಪಕ್ಷದವರು ನಮ್ಮ ಮಲೆನಾಡಿನಲ್ಲಿದ್ದ ಒಳ್ಳೆಯ ಕಾಡುಗಳನ್ನು ಕಡಿದು ಮಲೆನಾಡನ್ನು ನಾಶಮಾಡುತ್ತಿದ್ದಾರೆ. ಇದರಿಂದಾಗಿ ಇಲ್ಲಿ ಮಳೆ ಬರುತ್ತಿಲ್ಲ. ಹಿಂದೆ ಒಳ್ಳೆಯ ಮಳೆ ಬರುತ್ತಿತ್ತು, ಆದರಿಂದ ಒಳ್ಳೇ ಭತ್ತ ಬೆಳೆಯುತ್ತಿದ್ದರು. ಈಚೆಗೆ ಇಲ್ಲಿ ಬಿತ್ತನೆ ಮಾಡಿ ಮಳೆಗಾಗಿ ಕಾದರೂ ಮಳೆ ಬಾರದೇ ಹೋಗಿರುವುದರಿಂದ ಇಲ್ಲಿರುವ ಪೈರುಗಳು ಆಗಲೇ ಒಣಗುತ್ತಾ ಬರುತ್ತಿದೆ. ಇದರಿಂದಾಗಿ ಇಂದು ಮಲೆನಾಡಿನಲ್ಲಿ ಕೂಡ ಕ್ಷಾಮ ಬರುವಂತಾಗಿದೆ. ನಮ್ಮ ಮೈಸೂರು ರಾಜ್ಯದಲ್ಲಿ ಇತರ ಕಡೆಗಳಲ್ಲಿ ಯಾವ ರೀತಿಯಾದ ಕ್ಷಾಮದ ಪರಿಸ್ಥಿತಿ ಇದೆಯೋ ಅದೇ ರೀತಿಯಾದ ಪರಿಸ್ಥಿತಿಯೂ ನಮ್ಮ ಕಡೆ ಇದೆ. ಬೇರೆ ಕಡೆಗಳಲ್ಲಿ ಲಿಫ್ಟ್ ಇರಿಗೇಷನ್ ಕೆಲಸಗಳನ್ನು ಮಾಡಲು ಮತ್ತು ಇತರ ಕೆಲಸಗಳನ್ನು ಮಾಡಲು ಹೇಗೆ ಸರಕಾರ ಹಣ ಸಹಾಯ ಮಾಡುತ್ತಿದೆಯೋ ನಮ್ಮ ಭಾಗಗಳಿಗೂ ಇಲ್ಲಿನ ಜನ ಉಳಿಯಬೇಕಾದರೆ ಸಹಾಯ ಮಾಡಬೇಕೆಂದು ಹೇಳುತ್ತೇನೆ.

ಅಲ್ಲದೆ ಇನ್ನೊಂದು ವಿಚಾರವನ್ನು ಮಾನ್ಯ ಸದಸ್ಯರಾದ ಶ್ರೀ ವಿ. ಎನ್. ಪಾಟೀಲರು ಇಲ್ಲಿ ಹೇಳಿದರು. ಮೈಸೂರು ದೇಶದಲ್ಲಿ ಜನರು ಇನ್ನು ಕೆಲವೇ ದಿನಗಳಲ್ಲಿ ದಸರಾ ಹಬ್ಬವನ್ನು ನಾಡಹಬ್ಬವಾಗಿ ಆಚರಿಸುವವರಿದ್ದಾರೆ. ಆ ಹಬ್ಬವನ್ನು ಈ ವರ್ಷ ಆಚರಿಸುವುದು ಬೇಡ ಎಂದು ಅವರು ಹೇಳಿದಂತೆ ನಾನೂ ಹೇಳುತ್ತೇನೆ. ಇಂತಹ ಹಬ್ಬಗಳಿಗೆ ಖರ್ಚು ಮಾಡುವ ಹಣವನ್ನು ಬಡಜನತೆಯ ಅನುಕೂಲಕ್ಕಾಗಿ ಖರ್ಚು ಮಾಡಿ ಈ ದಸರಾ ಹಬ್ಬವನ್ನು ಮಾಡುವುದು ಬೇಡ ಎಂದು ಇಲ್ಲಿ ಸೂಚನೆ ಮಾಡುತ್ತೇನೆ. ಅಲ್ಲದೆ ನಮ್ಮ ಮೈಸೂರು ರಾಜ್ಯದಲ್ಲಿ ಒಂದು ವೀಕ್‌ನೆಸ್ ಇದೆ: ಮಾನ್ಯ ಮುಖ್ಯಮಂತ್ರಿಗಳು ಅಧಿಕಾರಕ್ಕೆ ಬಂದ ತರುಣದಲ್ಲಿ ಒಂದು ಪತ್ರಿಕಾ ಹೇಳಿಕೆಯನ್ನು ಕೊಡುತ್ತಾ ಅದರಲ್ಲಿ ಕೇಂದ್ರ ಸರಕಾರದವರು ನಮ್ಮ ಮೈಸೂರು ರಾಜ್ಯದ ಬಗ್ಗೆ ದೆಹಲಿಯಲ್ಲಿ ನೋಡಿದರೆ ಒಂದು ರೀತಿಯ ಮನೋಭಾವನೆ ತೋರಿಸುತ್ತಿದ್ದಾರೆ ಎಂದು ಹೇಳಿದರು. ಬೇರೆ ಕಡೆ ಕ್ಷಾಮದ ಪರಿಸ್ಥಿತಿ ಇರುವುದಕ್ಕಿಂತ ನಮ್ಮಲ್ಲಿ ಜಾಸ್ತಿಯಾಗಿದೆ. ಈ ಪರಿಸ್ಥಿತಿಯಲ್ಲಿ ನ್ಯಾಯವಾಗಿ ದೊರಕತಕ್ಕ ಧನ ಸಹಾಯ ಕೇಂದ್ರದವರು ನಮಗೆ ಖಂಡಿತ ಕೊಡಬೇಕು, ಹಾಗೆ ಕೊಡದಿದ್ದರೆ ಮೈಸೂರು ಸರಕಾರ ಎಲ್ಲ ಹಣ ಕೂಡಿಸುವುದಕ್ಕಾಗುವುದಿಲ್ಲ. ಕೇಂದ್ರದವರು ಈಗಾಗಲೇ 1200 ಕೋಟಿಯಷ್ಟು ಹಣ ಸಹಾಯ ಮಾಡುತ್ತಿರುವಾಗ ನಮ್ಮ ಸರಕಾರಕ್ಕೆ ಹೆಚ್ಚು ಸಹಾಯ ಮಾಡಬೇಕು, ಅಲ್ಲದೆ ನಮ್ಮಲ್ಲಿ ಇನ್‌ಕಂಟ್ಯಾಕ್ಸ್ ಕೊಡದೇ ಕೆಲವು ಕಡೆ ಬ್ಲ್ಯಾಕ್ ಮನಿ ಎಂದು ಏನು ಹೇಳುತ್ತಾರೆ ಅದನ್ನು ವಸೂಲು ಮಾಡಿಕೊಳ್ಳುವುದಕ್ಕೆ ಯಾವ ಪ್ರಯತ್ನವನ್ನೂ ಇದುವರೆಗೆ ಮಾಡಲಿಲ್ಲ. ಮತ್ತು ಇವರಿಂದ ಹಣ ಕಿತ್ತುಕೊಳ್ಳುವುದಕ್ಕೆ ಆಗಲಿಲ್ಲ, ಇದನ್ನು ವಸೂಲು ಮಾಡಿದ್ದೇ ಆದರೆ ಇನ್ನೂ 10–16 ಕೋಟಿಯಷ್ಟು ಹಣ ಬರುತ್ತಿತ್ತು ಮತ್ತು ನಮ್ಮ ದೇಶ ಮಾಡಿರುವ ಸಾಲವನ್ನಾದರೂ ತೀರಿಸಬಹುದಾಗಿತ್ತು. ಇಂತಹ ಹಣವನ್ನು ವಸೂಲು ಮಾಡುವುದರಲ್ಲಿ ಸರಕಾರ ಬಹಳ ನಿಸ್ಸಹಾಯಕವಾಗಿದೆ,

(ಶ್ರೀ ಎಸ್. ಬಂಗಾರಪ್ಪ)

ಇಲಾಖೆಗಳಲ್ಲಿರುವ ದೊಡ್ಡ ಅಧಿಕಾರಿಗಳು ಯಾವ ರೀತಿಯಾದ ಸಲಹೆ ಕೊಡುತ್ತಾರೋ ಅದನ್ನು ಜಾರಿಗೆ ತರಲು ನಮ್ಮ ಸರಕಾರ ಪ್ರಯತ್ನ ಮಾಡಬೇಕು ಇನ್ನು ಲ್ಯಾಂಡು ಗ್ರಾಂಟು ರೂಲ್ಸ್ ಎಂದು ಮಾಡಿದ್ದಾರೆ. ಇದರಲ್ಲಿ ಪಕ್ಕದಲ್ಲಿರುವ ಜಮೀನನ್ನು ಮಾರಾಟ ಮಾಡುವಾಗ ಒಂದು ಎಕರೆಗೆ ಮೂರು ಸಾವಿರಕ್ಕೆ ಮಾರಿದರೆ ಆ ಜಮೀನನ್ನೂ ಅಷ್ಟಕ್ಕೇ ಮಾರಬೇಕೆಂದು ಒಂದು ವಿಚಿತ್ರವಾದ ರೂಲ್ಸು ಮಾಡಿದ್ದಾರೆ. ಹೀಗೆ ಮೂರು ಸಾವಿರ ರೂಪಾಯಿಗಳಷ್ಟು ಕೊಡಬೇಕೆಂದು ನಿಗದಿ ಮಾಡಿರುವ ಕರಾಳ ಶಾಸನವನ್ನು ತಂದು ನಮ್ಮ ಮುಂದೆ ಇಡುತ್ತಿದ್ದಾರೆ. ಇಂತಹ ಕಾನೂನಿಂದ ಬಡತನದಲ್ಲಿರುವ ಜನರ ರಕ್ಷಣೆ ಮಾಡಿದಂತಾಗುತ್ತದೆಯೇ ?

ಇನ್ನು ನಾನು ಆಗಲೇ ಹೇಳಿದ ಹಾಗೆ ಅಂಡರ್‌ಗ್ರೌಂಡ್ ಡ್ರೇನೇಜು ಮೂಲಕ ಎಲ್ಲೆಲ್ಲಿ ನೀರು ಸಿಗಬಹುದೋ ಅವನ್ನು ಟ್ಯಾಪ್ ಮಾಡಬೇಕು ಮತ್ತು ಇಂತಹ ಕ್ಷಾಮ ಪರಿಸ್ಥಿತಿಯಲ್ಲಿ ಅವಶ್ಯಕವಾದ ಎಲ್ಲ ಕಾರ್ಯಕ್ರಮಗಳನ್ನು ಬೇಗನೆ ತೆಗೆದುಕೊಳ್ಳಬೇಕು ಎಂದು ಹೇಳಿ ಇಷ್ಟು ಮಾತಾಡಲು ಅವಕಾಶ ಕೊಟ್ಟ ಅಧ್ಯಕ್ಷರನ್ನು ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

†ಶ್ರೀ ಕೆ. ಸಿಂಗಾರಿ ಗೌಡ (ನಾಗಮಂಗಲ).—ಮಾನ್ಯ ಅಧ್ಯಕ್ಷರೇ, ನಮ್ಮ ದೇಶದಲ್ಲಿ ಇಂದು ಮಳೆ ಬೆಳೆ ಇಲ್ಲದೆ ರೈತ ಕೆಂಗೆಟ್ಟು ಹೋಗಿದ್ದಾನೆ. ಇಂತಹ ಜನಕ್ಕೆ ಕೆಲಸಗಳನ್ನು ಒದಗಿಸಿಕೊಟ್ಟು ಕೂಲಿ ಕೊಡಲು ಕೆಲವಾರು ಕಾರ್ಯಕ್ರಮಗಳನ್ನು ಮಾಡಿದ್ದೇವೆ ಎಂದು ಇಲ್ಲಿ ಮಾನ್ಯ ಮುಖ್ಯ ಮಂತ್ರಿಗಳು ಹೇಳುವಾಗ ಕೆಲವು ವಿವರಗಳನ್ನು ಹೇಳಿದರು ಮತ್ತು ವಿವರಣೆಯ ಒಂದು ಪಟ್ಟಿಯನ್ನು ಕೂಡ ಕೊಟ್ಟಿದ್ದಾರೆ. ಬಹುಶಃ ಈಗ್ಗೆ ಎರಡು ತಿಂಗಳ ಹಿಂದೆಯೇ ಇಂತಹ ಕೆಲಸಗಳನ್ನು ಮಾಡಬೇಕೆಂದು ಎಚ್ಚರಿಕೆ ವಹಿಸಿ ಕೆಲಸ ಮಾಡಬೇಕೆಂದು ಅಲ್ಲಲ್ಲಿ ಕೆಲಸಗಳನ್ನು ಮಾಡಿದ್ದಾರೆ. ಬಹುಶಃ ಬಡ್ಜೆಟಿನಲ್ಲಿ ಇಲ್ಲದಿದ್ದರೂ ಅಲ್ಲಲ್ಲಿ ಕೆಲವು ಕೆಲಸಕಾರ್ಯಗಳು ನಡೆದಿವೆ. ತಾತ್ಕಾಲಿಕವಾದ ಪರಿಹಾರದ ಕಾಮಗಾರಿಗಳನ್ನು ಹೆಚ್ಚಾಗಿ ಮಾಡಬೇಕು ಎನ್ನುವುದನ್ನು ಸರಕಾರದವರೂ ಮನಗಾಣಬೇಕು. ನಮ್ಮ ದೇಶದ ಆರ್ಥಿಕ ಸ್ಥಿತಿ ಸರಿಯಾಗಿಲ್ಲದ ಕಾರಣ ಎಲ್ಲ ಕೆಲಸಗಳನ್ನು ತೆಗೆದುಕೊಳ್ಳಲು ಆಗದೇ ಕೇಂದ್ರ ಸರಕಾರದ ನೆರವನ್ನೂ ಪಡೆಯದೇ ಮಾಡಲು ಸಾಧ್ಯವಿಲ್ಲ. ಬಹುಶಃ ಅಭಾವದ ಪರಿಸ್ಥಿತಿಯ ಎಲ್ಲ ಕೆಲಸಕಾರ್ಯಗಳಿಗೂ ನಮ್ಮ ಸರಕಾರ ಕೇಂದ್ರ ಸರಕಾರದ ಮೇಲೇ ಅವಲಂಬಿಸಿದ್ದಾರೆ. ಕೇಂದ್ರದವರು ನಮ್ಮ ಸರಕಾರಕ್ಕೆ ಹಣ ಒದಗಿಸಿ ಕೊಟ್ಟಂತೆ, ಜನಕ್ಕೆ ಕೆಲಸಗಳನ್ನು ಕೊಟ್ಟು ಕೂಲಿ ಒದಗಿಸುತ್ತಿದ್ದಾರೆ. ಕೇಂದ್ರದವರೂ ಕೂಡ ಮಾನವೀಯತೆಯಿಂದ ಇದನ್ನು ಪರಿಶೀಲನೆ ಮಾಡುತ್ತಾರೆಯೇ ಎಂದು ನೋಡಿದರೆ ಅವರು ಅಷ್ಟು ಮನವೀಯತೆಯಿಂದ ವರ್ತಿಸುತ್ತಿಲ್ಲ ಎಂದು ವಿಷಾದದಿಂದ ಇಲ್ಲಿ ಹೇಳಬೇಕಾಗಿದೆ. ಮುಖ್ಯ ಮಂತ್ರಿಗಳು ಕೂಡಲೇ ನೀರಾವರಿಯ ಕೆಲಸಗಳಿಗೆ ಸ್ವಲ್ಪ ಹೆಚ್ಚು ಗಮನ ಕೊಡಬೇಕೆಂದು ಅಲ್ಲಲ್ಲಿ ಕೆಲಸಗಳನ್ನು ನಡೆಸುತ್ತಿದ್ದಾರೆ, ಕೆರೆ ಕಟ್ಟೆಗಳನ್ನು ಕಟ್ಟಿಸಿ ಜನಕ್ಕೆ ಸಹಾಯ ಮಾಡಬೇಕೆಂದು ಕೆಲಸಗಳನ್ನು ಮಾಡುತ್ತಿದ್ದಾರೆ ಮತ್ತು ಕಂದಾಯ ಕೊಡಲು ಶಕ್ತಿ ಇಲ್ಲದವರಿಗೆ ಅದನ್ನು ವಜಾ ಮಾಡುವುದು, ಒಂದಲ್ಲ ಒಂದು ರೀತಿಯಲ್ಲಿ ಬೆಳೆ ಬರುವುದಕ್ಕೆ ಅನುಕೂಲವಾಗುವಂತೆ ಕೆಲವು ಕಾಮಗಾರಿಗಳನ್ನು ಮಾಡಬೇಕೆಂದು ಮಾಡುತ್ತಿದ್ದಾರೆ. ಬಹುಶಃ ಇಂತಹ ಅಭಾವ ಎಂದೂ ಬಂದಿರಲಿಲ್ಲ ಎಂದು ಕೊಟ್ಟಿರುವ ಹೇಳಿಕೆಯಿಂದ ಗೊತ್ತಾಗುತ್ತದೆ.

ಇನ್ನೊಂದು ವಿಷಯವನ್ನು ಸರಕಾರ ಇಲ್ಲಿ ಗಮನಿಸಬೇಕು. ಈ ರಾಜ್ಯದಲ್ಲಿ ಕೆಲಸಕಾರ್ಯಗಳನ್ನು ಮಾಡುವಾಗ ಸಣ್ಣ ಸಣ್ಣ ಕೆಲಸಕಾರ್ಯಗಳನ್ನು ತೆಗೆದುಕೊಂಡಿದ್ದರೂ ಕೂಡ ಅವು 15–20 ದಿನಗಳಲ್ಲಿ ಮುಗಿಯುವುದಾಗಿದ್ದರೂ ಅಂತಹ ಕೆಲಸಗಳನ್ನು ಪೂರ್ತಿಯಾಗಿ ಮಾಡುತ್ತಿಲ್ಲ. ಕೆರೆಯಲ್ಲಿ ಇರುವ ಹೂಳನ್ನು ತೆಗೆಸುವಕಾರ್ಯವನ್ನು ಕೂಡ ಸರಿಯಾಗಿ ಮಾಡುತ್ತಿಲ್ಲ. ಹೂಳು ತೆಗೆಯದೇ ಇದ್ದರೆ ಮಳೆ ಬಂದಾಗ ಅಲ್ಲಿ ನೀರು ನಿಲ್ಲಲು ಅವಕಾಶವಾಗುವುದಿಲ್ಲ. ಮುಖ್ಯ ಮಂತ್ರಿಗಳು ಬಡ್ಜೆಟ್ಟಿನಲ್ಲಿ ಏನು ಕೆಲಸಕಾರ್ಯಗಳನ್ನು ಮಾಡಬೇಕೆಂದು ಪ್ರಾಧಾನ್ಯತೆ ಕೊಟ್ಟಿದ್ದರೋ ಅಂತಹ ಕೆಲಸಗಳನ್ನು ಇದುವರೆಗೂ ಸರಿಯಾಗಿ ಮಾಡುತ್ತಿಲ್ಲ. ಎನ್ನುವುದು ನಮಗೆ ಮನವರಿಕೆಯಾಗುತ್ತಿದೆ. ಕಳೆದ ಸಾರಿ ನಮ್ಮ ಜಿಲ್ಲೆಯಲ್ಲಿ ಕೆಲವು ಕೆಲಸಕಾರ್ಯಗಳನ್ನು ತೆಗೆದುಕೊಂಡು ಅದನ್ನು ಜಾಗ್ರತೆಯಾಗಿ ನಡೆಸಬೇಕು ಎಂದಿದ್ದರೂ ತಾಂತ್ರಿಕ ಸಿಬ್ಬಂದಿ ತೊಂದರೆಗಳಿಂದಾಗಿ ಆ ಕೆಲಸಗಳನ್ನು ಇನ್ನೂ ಮಾಡುವುದಕ್ಕೆ ಸಾಧ್ಯವಾಗಲಿಲ್ಲ ಎಂದು ಹೇಳುವುದಕ್ಕೆ ವಿಷಾದವಾಗಿದೆ. ರೈತರು ಬೆಳೆಯತಕ್ಕ ಬೆಳೆಗಳೇನಿವೆ ಅವುಗಳಿಗೆ ಒಂದು ನಿಗದಿಯಾದ ಬೆಲೆ ಸಿಕ್ಕುವವರೆಗೂ ಸರ್ಕಾರದವರು ಈ ಕಾರ್ಯಗಳನ್ನು ಮುಂದುವರಿಸಿಕೊಂಡು ಹೋಗಬೇಕೆಂದು ನಾನು ತಮ್ಮಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಹಾಗೆ ಚಿಕ್ಕ ಚಿಕ್ಕ ನೀರಾವರಿ ಯೋಜನೆಗಳಿಗೂ ಹೆಚ್ಚಿನ ಪ್ರಾಶಸ್ತ್ಯ ಕೊಡ

ಬೇಕಾದ್ದು ಅತ್ಯಗತ್ಯ. ಅಷ್ಟೇ ಅಲ್ಲದೆ ಬಾವಿಗಳಲ್ಲಿ ನೀರು ಧಾರಾಳವಾಗಿ ಇರತಕ್ಕ ಕಡೆಗಳಲ್ಲಿ ರೈತರಿಗೆ ವಿದ್ಯುಚ್ಛಕ್ತಿ ಮತ್ತು ಪಂಪ್‌ಸೆಟುಗಳನ್ನು ಒದಗಿಸಬೇಕಾದ್ದು ಅತ್ಯವಶ್ಯಕ. ನಮ್ಮ ಮುಖ್ಯ ಮಂತ್ರಿಗಳು ಈ ಯೋಜನೆಗಳನ್ನು ಒಂದು ನಿರ್ದಿಷ್ಟವಾದ ಯೋಜನೆಯ ಪ್ರಕಾರ ನಡೆಸಿದ್ದೇ ಆದ ಪಕ್ಷದಲ್ಲಿ ಇನ್ನು ಕೆಲವಾರು ವರ್ಷಗಳಲ್ಲಾದರೂ ನಮ್ಮ ರಾಜ್ಯದಲ್ಲಿ ಆಗಾಗ್ಗೆ ಬರತಕ್ಕ ಕ್ಷಾಮವನ್ನು ಶಾಶ್ವತವಾಗಿ ತಡೆಗಟ್ಟುವುದಕ್ಕೆ ಸಾಧ್ಯವಾಗಬಹುದು ಎಂಬ ಭರವಸೆ ನಮಗಿದೆ.

ಇನ್ನು ತಾಲ್ಲೂಕ್ ಮಟ್ಟದಲ್ಲಿರತಕ್ಕ ಎಲ್ಲಾ ಅಧಿಕಾರಿಗಳೂ ಒಟ್ಟಾಗಿ ಸೇರಿ ಸೇವಾಮನೋಭಾವದಿಂದ ಕೆಲಸ ಮಾಡಿದರೆ ಬಹಳ ಅನುಕೂಲವಾಗುತ್ತದೆ. ಆದರೆ ಇಲ್ಲಿ ಕೆಲಸಗಳನ್ನು ನಡೆಸತಕ್ಕ ಅಧಿಕಾರಿ ಒಬ್ಬರಾದರೆ ಕೂಲಿಯನ್ನು ಬಟವಾಡೆ ಮಾಡತಕ್ಕ ಅಧಿಕಾರಿಗಳು ಬೇರೊಬ್ಬರಿರುತ್ತಾರೆ. ಕೂಲಿಯನ್ನು ಬಟವಾಡೆ ಮಾಡತಕ್ಕ ಕಾಲದಲ್ಲಿ ಡ್ರಾಯಿಂಗ್ ಆಫೀಸರಾದವರು ಕೆಲಸಕ್ಕೆ ನೇಮಕ ಮಾಡಿಕೊಂಡಿದ್ದ ಜನರ ಅಕೌಂಟನ್ನು ಕೆಲಸ ಮಾಡಿಸಿದ ಅಧಿಕಾರಿಗಳು ಕೊಡಬೇಕೆಂದು ಒತ್ತಾಯ ಮಾಡುತ್ತಿದ್ದಾರೆ. ಹೀಗೆ ಕೆಲಸಗಳನ್ನು ತ್ವರಿತವಾಗಿ ನಡೆಸಬೇಕೆಂದು ಹೇಳತಕ್ಕ ಕಾಲದಲ್ಲಿ ಒಬ್ಬ ಅಧಿಕಾರಿ ಇನ್ನೊಬ್ಬ ಅಧಿಕಾರಿಯನ್ನು ನಂಬದೆ ಕೆಲಸ ಮಾಡಲು ಒಬ್ಬರಿಗೊಬ್ಬರು ಹಿಂಜರಿಯುತ್ತಾ ಹೋದರೆ ಕೆಲಸಗಳಾಗುವುದಿಲ್ಲ. ಆದ್ದರಿಂದ ಎಲ್ಲರೂ ಸಹಕರಿಸಿಕೊಂಡು ಕೆಲಸ ಮಾಡಬೇಕೆಂದು ಅದಕ್ಕೆ ಸರ್ಕಾರದವರು ಸೂಕ್ತ ತಿಳುವಳಿಕೆಯನ್ನು ಕೊಡಬೇಕೆಂದೂ ನಾನು ಕೇಳಿಕೊಳ್ಳುತ್ತೇನೆ.

ಇನ್ನು ಬಾವಿಗಳ ವಿಚಾರಕ್ಕೆ ಬಂದರೆ—ಈ ನೀರಾವರಿ ಬಾವಿಗಳಲ್ಲಿ ಸಾಕಷ್ಟು ನೀರು ಇರುವುದಿಲ್ಲ. ಇವುಗಳನ್ನು ಮತ್ತಷ್ಟು ಆಳಕ್ಕೆ ಇಳಿಸಬೇಕಾಗುತ್ತದೆ. ಅದಕ್ಕೆ ಹಣಬೇಕು. ರೈತನು ಲ್ಯಾಂಡ್‌ಮಾರ್ಟ್‌ಗೇಜ್ ಬ್ಯಾಂಕಿನಲ್ಲಿ ಸಾಲ ಕೇಳುವುದಕ್ಕೆ ಹೋಗುವಂತಿಲ್ಲ. ಏಕೆಂದರೆ ಕಳೆದ ಮೂರು ವರ್ಷಗಳಿಂದಲೂ ಒಂದೇಸಮನಾಗಿ ಕ್ಷಾಮ ಬರುತ್ತಿರುವುದರಿಂದ ಹಿಂದೆ ಅಭಿವೃದ್ಧಿಗಾಗಿ ಸಾಲಗಳನ್ನು ಪಡೆದಿದ್ದ ರೈತರು ಆ ಕಂತುಗಳನ್ನು ಸಕಾಲಕ್ಕೆ ತೀರಿಸುವುದಕ್ಕೆ ಸಾಧ್ಯವಾಗಲಿಲ್ಲ. ಆ ಕಂತು ಬಾಕಿಗಳನ್ನು ಪೂರ್ತಿಯಾಗಿ ಪಾವತಿ ಮಾಡದೆ ಹಾಗೂ ಆ ಸಾಲವನ್ನು ಸಂಪೂರ್ಣವಾಗಿ ತೀರಿಸದೆ ಇದ್ದಾಗ ಮತ್ತೆ ಹೊಸ ಸಾಲಗಳನ್ನು ಕೊಡುವುದಿಲ್ಲ ಎಂದು ಹೇಳುತ್ತಿದ್ದಾರೆ. ಆದ್ದರಿಂದ ಸರ್ಕಾರದವರು ಈ ನಿರ್ಬಂಧವನ್ನು ಸಡಿಲಮಾಡಬೇಕು. ಹಿಂದಿನ ಸಾಲದ ಕಂತುಗಳನ್ನು ಪೂರ್ತಿಯಾಗಿ ಕೊಡದಿದ್ದರೂ ಬಾವಿಗಾಗಿ ಯಾರು ಯಾರು ಸಾಲ ಕೇಳುತ್ತಾರೋ ಅಂಥವರಿಗೆಲ್ಲಾ ಮತ್ತೆ ಸಾಲ ಕೊಡುವುದಕ್ಕೆ ಸರ್ಕಾರದವರು ಏರ್ಪಾಡನ್ನು ಮಾಡಬೇಕು. ಹಾಗೇ ಎಲ್ಲೆಲ್ಲಿ ಹೊಸದಾಗಿ ಬಾವಿಗಳನ್ನು ತೆಗೆಯುತ್ತಾರೋ ಅಲ್ಲೆಲ್ಲಾ ರೈತರಿಗೆ ಕೂಡಲೆ ವಿದ್ಯುಚ್ಛಕ್ತಿಯನ್ನು ಒದಗಿಸಿ ಪಂಪ್‌ಸೆಟ್ಟುಗಳನ್ನು ಕೊಟ್ಟು ಅವರು ಆಹಾರ ಧಾನ್ಯಗಳನ್ನು ಬೆಳೆಯುವುದಕ್ಕೆ ಅವಕಾಶ ಮಾಡಿಕೊಡಬೇಕು. ಆದರೆ ಈ ವಿದ್ಯುಚ್ಛಕ್ತಿಯನ್ನು ಒದಗಿಸತಕ್ಕ ವಿಚಾರದಲ್ಲಿ ನನಗೊಂದು ಶಂಕೆಯುಂಟಾಗಿದೆ. ಈ ಬಗ್ಗೆ ಒಂದು ನಿರ್ದಿಷ್ಟವಾದ ನಿಲುವಿಲ್ಲ, ನೀತಿಯಿಲ್ಲ. ಎಲೆಕ್ಟ್ರಿಸಿಟಿ ಬೋರ್ಡಿನವರು ವಿದ್ಯುಚ್ಛಕ್ತಿಯನ್ನು ಹಾಗೂ ಅದನ್ನು ಒದಗಿಸತಕ್ಕ ಸಲಕರಣೆಗಳನ್ನು ಒದಗಿಸತಕ್ಕ ವಿಚಾರದಲ್ಲಿ ಬಹಳ ಔದಾಸೀನ್ಯದಿಂದ್ದಾರೆ. ವಿದ್ಯುಚ್ಛಕ್ತಿಯನ್ನೊದಗಿಸತಕ್ಕ ಸಲಕರಣೆಗಳ ಎಸ್ಟಿಮೇಟ್ ಒಂದಾವರ್ತಿ 600 ರೂಪಾಯಿಗಳಾದರೆ ಇನ್ನೊಂದು ಸಾರ್ತಿಗೆ 1000 ರೂಪಾಯಿಗಳೆಂದು ಹೇಳುತ್ತಾರೆ. ಇಲ್ಲಿ ಪಂಪ್‌ಸೆಟ್ಟಿನ ಬೆಲೆಯೇ ಬೇರೆ, ಬಾವಿಗೆ ವಿದ್ಯುಚ್ಛಕ್ತಿಯನ್ನು ಒದಗಿಸತಕ್ಕ ಖರ್ಚೇ ಬೇರೆ ಎಂದು ಹೇಳುತ್ತಿದ್ದಾರೆ. ನಮಗೆ ಇದು ಒಂದೂ ಸರಿಯಾಗಿ ಅರ್ಥವಾಗುತ್ತಿಲ್ಲ. ಆದ್ದರಿಂದ ಸರ್ಕಾರದವರು ಎಲೆಕ್ಟ್ರಿಸಿಟಿ ಬೋರ್ಡಿಗೆ ಒಂದು ಪತ್ರ ಬರೆದು ಅವರು ನಿರ್ದಿಷ್ಟವಾದ ನಿಲುವನ್ನು ಅಲ್ಲಿ ಕೆಲಸಮಾಡತಕ್ಕ ಎಗ್ಸಿಕ್ಯುಟೀವ್ ಇಂಜಿನಿಯರುಗಳಿಗೆ ತಿಳಿಸುವಂತೆ ವ್ಯವಸ್ಥೆಮಾಡಬೇಕು.

ಇನ್ನು ಸರ್ಕಾರದವರು ಅಲ್ಲಲ್ಲೇ ಗಂಜೀ ಕೇಂದ್ರಗಳನ್ನು ತೆರೆದಿದ್ದಾರೆ. ಇದಕ್ಕೆ ಕೇರ್ ಇತ್ಯಾದಿ ಸಂಸ್ಥೆಗಳಿಂದ ಸಹಾಯ ಪಡೆದು ನಡೆಸಲಾಗುತ್ತಿದೆ. ಇವುಗಳನ್ನು ಇನ್ನೂ ದೀರ್ಘಕಾಲದವರೆಗೂ ವಿಸ್ತರಿಸಬೇಕೆಂದು ಕೇಳಿಕೊಳ್ಳುತ್ತೇನೆ. ಇಂಥ ವಿಚಾರಗಳಲ್ಲಿ ಸರ್ಕಾರದವರು ಒಂದು ನಿರ್ದಿಷ್ಟವಾದ ನಿಲುವನ್ನೂ ನೀತಿಯನ್ನು ಅನುಸರಿಸಬೇಕೆಂದು ಹೇಳುತ್ತೇನೆ.

ಇನ್ನು ಕುಡಿಯುವ ನೀರಿನ ಬಾವಿಗಳ ವಿಚಾರಕ್ಕೆ ಬಂದರೆ ಅನೇಕ ಬಾವಿಗಳು ಬತ್ತಿಹೋಗಿವೆ. ಅವುಗಳನ್ನು ಆಳಪಡಿಸಬೇಕು. ಕೆಲವು ಕಡೆ ಬಾವಿಗಳಿಗೆ ದಡಕ್ಕೆಲ್ಲಾ ಕಲ್ಲನ್ನು ಕಟ್ಟಿರುತ್ತಾರೆ. ಇನ್ನು ಕೆಲವು ಭಾವಿಗಳು 80-100 ಅಡಿಗಳ ಆಳಕ್ಕೆ ಇಳಿದಿರುತ್ತವೆ. ಅಂಥ ಬಾವಿಗಳನ್ನು ಆಳಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಅಂಥ ಕಡೆಗಳಲ್ಲಿ ಸರ್ಕಾರದವರು ತಮ್ಮ ಕೈಕೆಳಗಿರತಕ್ಕ ಜಿಯಲಾಜಿಕಲ್ ಇಲಾಖೆಯ ಅಥವಾ ವ್ಯವಸಾಯದ ಇಲಾಖೆಯ ಅಧಿಕಾರಿಗಳ ಸಹಾಯ ತೆಗೆದುಕೊಂಡು ಬೋರ್ ವೆಲ್‌ಗಳನ್ನು ಹಾಕಿ ಜನರಿಗೆ ಅನುಕೂಲ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

(ಶ್ರೀ ಕೆ. ಸಿಂಗಾರಿ ಗೌಡ)

ಈ ಬಾಬಿಗೆ ಸ್ವಲ್ಪ ದುಡ್ಡು ಹೆಚ್ಚಿಗೆ ಖರ್ಚಾದರೂ ಚಿಂತೆಯಿಲ್ಲ ಶಾಶ್ವತವಾದ ಕೆಲಸ ಮಾಡುವುದಕ್ಕೆ ಸರ್ಕಾರದವರು ಪ್ರಯತ್ನ ಮಾಡಬೇಕು. ಆದರೆ ಇದರಲ್ಲಿ ಒಂದು ಕಷ್ಟದ ಅಂಶವಿದೆ. ಜನರು ಅರ್ಧಭಾಗದ ಹಣವನ್ನು ಕಾಂಟ್ರಿಬ್ಯೂಟ್ ಮಾಡಬೇಕೆಂಬ ನಿರ್ಬಂಧವಿದೆ. ಆದರೆ ಯಾರು ಯಾರಿಗೆ ಅದನ್ನು ಕೊಡುವುದಕ್ಕೆ ಶಕ್ತಿ ಇದೆಯೋ ಅಂಥವರಿಂದ ಮಾತ್ರ ವಸೂಲ್ಮಾಡಿಕೊಂಡು ಇನ್ನುಳಿದ ಕಡೆಗಳಲ್ಲಿ ಅದನ್ನು ಮನ್ನಾ ಮಾಡಬೇಕೆಂದು ನಾನು ನಮ್ಮ ಮುಖ್ಯ ಮಂತ್ರಿಗಳಲ್ಲಿ ಮನವಿ ಮಾಡಿಕೊಳ್ಳುತ್ತೇನೆ. ಇದಕ್ಕೆಲ್ಲಾ ಕಾರಣವೇನೆಂದರೆ ಒಂದೇ ಸಮನಾಗಿ ಮೂರು ನಾಲ್ಕು ವರ್ಷಗಳಿಂದ ಗೊಟ್ಟು ಬೀಳುತ್ತಿರುವುದರಿಂದ ಧಡೂತಿ ಕುಳಗಳು ಎಂದು ನಾವು ಯಾರು ಯಾರನ್ನು ಕರೆಯುತ್ತಿದ್ದೆವೋ ಅವರೆಲ್ಲಾ ಈ ದಿವಸ ಬಹಳ ಜಿಗುಪ್ಸೆ ಪಡತಕ್ಕ ಸ್ಥಿತಿಯಲ್ಲಿದ್ದಾರೆ. ಅವರು ಕೂಲಿ ಮಾಡುವುದಕ್ಕೆ ಹೊರಡಬೇಕಾದ ಕಾಲ ಬಂದಿದೆ.

ಇನ್ನು ಅನೇಕ ಭಾಗಗಳಲ್ಲಿ ಮಳೆ ಬೆಳೆಗಳಾಗದೆ ಜನರು ಕಷ್ಟಕ್ಕೊಳಗಾಗಿ ಸಾಲದ ಕಂತುಗಳನ್ನು ಕಟ್ಟುವುದಕ್ಕೆ ಸಾಧ್ಯವಾಗಿಲ್ಲ. ಅಂಥ ಕಡೆಗಳಲ್ಲಿ ಬಾಕಿ ನಿಂತಿರತಕ್ಕ ಸಾಲದ ಕಂತುಗಳ ಹಣವನ್ನಾಗಲೀ ಅಥವಾ ಕಂದಾಯದ ಬಾಕಿಗಳನ್ನಾಗಲೀ ಅಧಿಕಾರಿಗಳು, ಅಂದರೆ ಯಾರು ಯಾರಲ್ಲಿ ಆ ಒಂದು ಮಾನವೀಯತೆಯ ದೃಷ್ಟಿಯಿಲ್ಲವೋ ಅಂಥ ಅಧಿಕಾರಿಗಳಿಗೆಲ್ಲಾ ಆ ಸಾಲಗಳ ಹಣವನ್ನು ರೈತನಿಗೆ ತಾನು ಬೆಳೆಯತಕ್ಕ ಬೆಳೆಗೆ ಒಂದು ನಿಗದಿಯಾದ ಬೆಲೆ ಸಿಕ್ಕುವ ತನಕ ತಡೆಹಿಡಿಯಬೇಕೆಂದು ಸರ್ಕಾರದವರಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

ಇನ್ನು ಕೆಲವು ಮಾನ್ಯ ಸದಸ್ಯರು ತಾಲ್ಲೂಕ್ ಡೆವಲಪ್‌ಮೆಂಟ್ ಬೋರ್ಡುಗಳಿಗೆ ಈ ಕೆಲಸ ಗಳನ್ನು ನೇಮಿಸಿದರೆ ಅವು ಸಮರ್ಪಕವಾಗಿ ನಡೆಯುವುದಿಲ್ಲ, ಅನೇಕ ಲೋಪದೋಷಗಳಿಗೆ ಅವಕಾಶವಾಗುತ್ತದೆಂದು ಹೇಳಿದ್ದಾರೆ. ಅದನ್ನು ನಾನು ಒಪ್ಪಲಾರೆ. ಅನೇಕ ತಾಲ್ಲೂಕುಗಳಲ್ಲಿ ಅಕ್ರಮಗಳಾಗಿದೆ ಎಂದು ಹೇಳಿದ್ದಾರೆ. ಆದರೆ ನನ್ನ ಕ್ಷೇತ್ರದಲ್ಲೇನೂ ಅಂಥ ಅಕ್ರಮಗಳಾಗಿಲ್ಲ. ಅಲ್ಲಿ ಆಫಾರೆಸ್ಟೇಷನ್ ಕೆಲಸ ನಡೆಯುತ್ತಿದೆ. ಅದನ್ನು ಫಾರೆಸ್ಟ್ ಇಲಾಖೆಯವರು ನಡೆಸಿಕೊಂಡು ಹೋಗುತ್ತಿದ್ದಾರೆ. ಹಾಗೇ ಕಾಂಟೂರ್ ಬಂಡಿಂಗ್ ಕೆಲಸವನ್ನು ಅದಕ್ಕೆ ಸಂಬಂಧಪಟ್ಟ ಇಲಾಖೆಯವರು ನಡೆಸಿಕೊಂಡು ಹೋಗುತ್ತಿದ್ದಾರೆ. ಅದೇ ರೀತಿ ನೀರಾವರಿ ಕಾಂಗಾರಿಗಳನ್ನು ಪಿ.ಡಬ್ಲ್ಯು.ಡಿ. ಅವರು ಕಾರ್ಯಗತ ಮಾಡಿಕೊಂಡು ಹೋಗುತ್ತಿದ್ದಾರೆ. ಆದರೆ ತಾಲ್ಲೂಕ್ ಅಭಿವೃದ್ಧಿ ಮಂಡಲಿಯಾಲ್ಲಾದರೂ ಇರತಕ್ಕವರು ಯಾರು? ಎಲ್ಲರೂ ನಮ್ಮವರೇ ಅವರೂ ಸಹಾ ನಮ್ಮ ಹಾಗೆ ಅಲ್ಲಿಗೆ ಚುನಾಯಿತರಾಗಿ ಬಂದಿರುತ್ತಾರೆ. ಆ ಸಭೆಗಳಲ್ಲಿ ಶಾಸನ ಸಭೆಗಳ ಸದಸ್ಯರೂ ಇರುತ್ತಾರೆ. ಖಾಸಗೀ ಅಧ್ಯಕ್ಷರಿರುತ್ತಾರೆ. ಎಲ್ಲರೂ ಸಹಕರಿಸಿ ನಡೆದುಕೊಂಡರೆ ಜನರಿಗೆ ತ್ವರಿತವಾಗಿ ಕೂಲಿಯ ಕೆಲಸಗಳಾದರೂ ಸಿಕ್ಕುವುದಕ್ಕೆ ಒಂದು ಮಾರ್ಗವಾಗುತ್ತದೆ. ಆದರೆ ತಾಲ್ಲೂಕ್ ಬೋರ್ಡ್‌ಗಳು ಸ್ವೇಚ್ಛೆಯಿಂದ ವರ್ತಿಸುತ್ತಿವೆ ಎಂಬ ಮಾತು ಸತ್ಯಕ್ಕೆ ದೂರವಾದದ್ದು. ಈಗ ಕೆಲಸ ಮಾಡುತ್ತಿರುವ ಏಜನ್ಸಿ ಸರಿಯಾಗಿದೆ. ನನಗೆ ಇಷ್ಟು ಮಾತನಾಡುವುದಕ್ಕೆ ಅವಕಾಶ ಮಾಡಿದ್ದಕ್ಕೆ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎಸ್. ಎಸ್. ಅರಕೇರಿ (ಬಳ್ಳೊಳ್ಳಿ).—ಮಾನ್ಯ ಸಭಾಪತಿಗಳೇ, ಈ ದಿವಸ ನಮ್ಮ ಈ ಸಭೆಯಲ್ಲಿ ಏನು ಅಭಾವ ಪರಿಸ್ಥಿತಿಯ ಮೇಲೆ ಒಂದು ಚರ್ಚೆ ನಡೆಯುತ್ತಿದೆ ಅದೇ ವಿಚಾರದಲ್ಲಿ ನಾನು ಕೂಡ ನಮ್ಮ ವಿಜಾಪುರ ಜಿಲ್ಲೆಯ ಪರಿಸ್ಥಿತಿ ಎಷ್ಟು ಭೀಕರವಾಗಿದೆ ಎಷ್ಟು ಗಂಭೀರವಾಗಿದೆ ಎಂಬುದನ್ನು ಅಧ್ಯಕ್ಷರ ಮೂಲಕ ಮಾನ್ಯ ಮುಖ್ಯ ಮಂತ್ರಿಗಳ ಹಾಗೂ ಮಾನ್ಯ ರೆವಿನ್ಯೂ ಮಂತ್ರಿ ಗಳ ಗಮನಕ್ಕೆ ತರಲಿಚ್ಛಿಸುತ್ತೇನೆ. ನಾನು ಬಳ್ಳೊಳ್ಳಿ ಕ್ಷೇತ್ರದಿಂದ ಬರುತ್ತಿದ್ದೇನೆ. ನನ್ನ ಕ್ಷೇತ್ರಕ್ಕೆ ಪಕ್ಕದಲ್ಲಿರತಕ್ಕದ್ದು ಇಂಡಿ ಕ್ಷೇತ್ರ. ಅಲ್ಲಿ ಮತ್ತು ವಿಜಾಪುರ ಜಿಲ್ಲೆಯ ಇನ್ನೂ ಅನೇಕ ಭಾಗಗಳಲ್ಲಿ ಪ್ರವಾಸ ಮಾಡಿಕೊಂಡು ನಾನಿಲ್ಲಿಗೆ ಬಂದಿದ್ದೇನೆ. ಅಲ್ಲೆಲ್ಲಾ ಜನರು ಯಾವ ಪರಿಸ್ಥಿತಿಯಲ್ಲಿದ್ದಾರೆ ಎಂಬುದನ್ನು ಸ್ವತಃ ನೋಡಿಕೊಂಡು ಬಂದಿದ್ದೇನೆ. ನಮ್ಮ ಜಿಲ್ಲೆಯಲ್ಲಿ ಉಂಟಾಗಿರತಕ್ಕ ಭೀಕರ ಪರಿಸ್ಥಿತಿಯನ್ನು ನೋಡಿ ನನಗೆ ಕಣ್ಣಿನಲ್ಲಿ ನೀರು ಬರುತ್ತದೆ. ಅಂಥ ದುಃಖಕರವಾದ ಪರಿಸ್ಥಿತಿ ಉಂಟಾಗಿದೆ. ಈ ಸಂದರ್ಭದಲ್ಲಿ ನಾನು ಬಡವರ ಹಾಗೂ ದೀನದಲಿತರ ವಿಚಾರವನ್ನು ಪ್ರಸ್ತಾಪ ಮಾಡುವುದಕ್ಕೆ ಹೋಗಿಲ್ಲ. ಅವರ ವಿಷಯವಾಗಿ ಸಂಪೂರ್ಣವಾಗಿ ಈ ಮಾನ್ಯ ಸಭೆಗೆ ಬಿಟ್ಟಿದ್ದೇನೆ. ಆದರೆ ನಾನು ಈಗ 10-50 ಎಕರೆಗಳಿಗೂ ಮೇಲ್ಪಟ್ಟು ಭೂಮಾಲಿಕರಾಗಿದ್ದವರ ವಿಚಾರ ಹೇಳುತ್ತಿದ್ದೇನೆ. ಈ ಭೂಮಾಲೀಕರು ಈ ದಿವಸ ಕೂಲಿ ಕೆಲಸ ಸಿಕ್ಕಿದರೆ ಸಾಕು ಎಂದು ಒದ್ದಾಡುತ್ತಿದ್ದಾರೆ, ಅದೂ ಸಹಾ ಸಿಕ್ಕುತ್ತಿಲ್ಲ.

ಇವತ್ತಿನದಿವಸ ರೈತರ ಪರಿಸ್ಥಿತಿ ಕೂಲಿಗಾರರಿಗಿಂತಲೂ ಕಡೆಯಾಗಿದೆ. ಇನ್ನು ಕೂಲಿಗಾರರು ಅಥವಾ ಕಾರ್ಮಿಕರ ಪರಿಸ್ಥಿತಿಯನ್ನಂತೂ ನಾವು ಕಣ್ಣಿನಿಂದ ನೋಡುವಂತಹ ಪರಿಸ್ಥಿತಿ ಇಲ್ಲ. ಇಂತಹ ಒಂದು ಕಳವಳಕರ ದೃಶ್ಯ ಬಿಜಾಪುರದ ಗ್ರಾಮಾಂತರಗಳಲ್ಲಿ ಕಂಡುಬರುತ್ತಿದೆ. ಆ ಹಳ್ಳಿಗಳಿಗೆ ಹೋದಾಗ ಇವತ್ತಿನ ದಿವಸ ಅವರಿಗೆ ಸರಿಯಾದಂತಹ ಆಹಾರ ಸಿಕ್ಕುವುದಿಲ್ಲ, ಕೂಲಿಯಂತೂ ಇಲ್ಲವೇ ಇಲ್ಲ, ಕುಡಿಯಲು ನೀರು ಸಿಕ್ಕುವುದಿಲ್ಲ, ಕುಡಿಯುವ ನೀರಿನ ಸಲುವಾಗಿ ಮೂರು ನಾಲ್ಕು ಮೈಲಿ ಕೊಡಗಳನ್ನು ಹಿಡಿದುಕೊಂಡು ಹೆಣ್ಣು ಮಕ್ಕಳು ಸಾಲುಸಾಲಾಗಿ ಹೋಗುವಂತಹ ಪರಿಸ್ಥಿತಿ ಕಾಣುತ್ತದೆ. ಈ ಪರಿಸ್ಥಿತಿ ಈಗಿನದಲ್ಲ, ಬಿಜಾಪುರ ರಾಜ್ಯದ ಇತಿಹಾಸ ನೋಡಿದರೂ ಕೂಡ ಅದು ಬರಗಾಲಕ್ಕೆ ಆಗಿಂದಾಗ್ಗೆ ಸಿಕ್ಕುತ್ತಲೇ ಇದೆ. 1900 ರಿಂದ 1968ರ ವರೆಗೂ ಸುಮಾರು 72 ಬರಗಾಲಗಳು ಅಲ್ಲಿ ಬಂದಿವೆ, ಅದಕ್ಕೆ ಪೂರ್ವ ಡೋಗೀಬರ ಅಂತ ಬಿದ್ದಿತ್ತು, ಅದರ ವಿಪರೀತ ಬರಗಾಲಕ್ಕೆ ತುತ್ತಾದ ಪ್ರದೇಶ ಈ ಬಿಜಾಪುರ ಜಿಲ್ಲೆ. ಡೋಗಿಬರ ಅಂತ ಅನ್ನುವುದು ಅಶುಭ ಚಿನ್ಹೆಗೆ ಪ್ರಸಿದ್ಧವಾದದ್ದು. ಅಂತಹ ಒಂದು ತಾಂಡವ ನೃತ್ಯ ಅಲ್ಲಿ ಇವತ್ತು ಕಾಣುತ್ತಾ ಇದೆ. ಬೆಳಗಾಂ ಡಿವಿಜನ್‌ಗೆ 17 ಲಕ್ಷ ರೂಪಾಯಿಗಳನ್ನು ಇಟ್ಟಿದ್ದೀರಿ. ಬೆಳಗಾಂ ಡಿವಿಜನ್‌ನಲ್ಲಿ ಈ ನಾಲ್ಕು ಜಿಲ್ಲೆಗಳು ಇವೆ, ಈ ನಾಲ್ಕು ಜಿಲ್ಲೆಗಳಲ್ಲಿ ಕೆಲಸ ತೆಗೆದುಕೊಂಡಾಗ ಒಟ್ಟು 65 ಲಕ್ಷ ಜನಸಂಖ್ಯೆ ಇರತಕ್ಕ ಆ ಪ್ರದೇಶದಲ್ಲಿ ಬಿಜಾಪುರ ಜಿಲ್ಲೆಯ ಜನಸಂಖ್ಯೆ 20 ಲಕ್ಷ ಆಗುತ್ತದೆ. ಆ 20 ಲಕ್ಷದಲ್ಲಿ ಜಾನುವಾರುಗಳೂ ಸೇರುತ್ತವೆ ಅಂದರೆ ನಮ್ಮ ಭಾಗಕ್ಕೆ 4 ಲಕ್ಷ ರೂಪಾಯಿಗಳು ಬಂದಂತೆ ಆಯಿತು. ಅಂದರೆ ಸರಾಸರಿ ತಲೆ ಒಂದಕ್ಕೆ 3 ಆಣೆ 4 ಆಣೆ ಬರುತ್ತದೆ. ಇದು ಪರಿಹಾರಕ್ಕೆ ಸರ್ಕಾರದವರು ಕೊಟ್ಟಿರುವ ದುಡ್ಡು. ಇದನ್ನು ನೋಡಿದಾಗ ಬಿಜಾಪುರ ಜಿಲ್ಲೆಯನ್ನು ಎಷ್ಟು ನಿರ್ಲಕ್ಷ್ಯ ಮಾಡಿದ್ದೀರಿ ಎಂಬುದನ್ನು ನೋಡಿ ಬಹಳ ದುಃಖವಾಗುತ್ತದೆ. ಬಿಜಾಪುರದ ಗೋಳ ಗುಮ್ಮಟ ಜಗತ್‌ಪ್ರಸಿದ್ಧವಾದದು. ಹಾಗೆಯೇ ಅದು ಬರಗಾಲಕ್ಕೂ ಕೂಡ ಪ್ರಸಿದ್ಧವಾಗಿದೆ. ಇಷ್ಟಾದರೂ ಸರ್ಕಾರದವರು ಅದನ್ನು ನಿರ್ಲಕ್ಷ್ಯಮಾಡಿದ್ದು ತುಂಬಾ ಅನ್ಯಾಯ. ಆದ್ದರಿಂದ ಸರ್ಕಾರದವರು ಸರಿಯಾದ ಯೋಜನೆಗಳನ್ನು ಕೈಕೊಂಡು ಪರಿಹಾರ ಕಾರ್ಯವನ್ನು ಮಾಡಬೇಕು. ಜನರು ಡಿ.ಸಿ. ಆಫೀಸುಗಳ ಮುಂದೆ, ತಾಲ್ಲೂಕು ತಹಸೀಲ್ದಾರರ ಆಫೀಸುಗಳ ಮುಂದೆ, ಸಾಲು ಸಾಲಾಗಿ ನಿಂತಿರುತ್ತಾರೆ, ದುಡಿಯಲು ಕೆಲಸ ಕೊಡಿ ಅನ್ನುವಂತಹ ಪರಿಸ್ಥಿತಿ ಇರುವಾಗ ಇವತ್ತಿನ ದಿವಸ ರೆವಿನ್ಯೂ ಆಫೀಸುಗಳಲ್ಲಿ ತಗಾಯಿ ಸಾಲದ ಬಾಕಿಯನ್ನು ವಸೂಲು ಮಾಡುವುದಕ್ಕೆ ಶುರು ಮಾಡಿದ್ದಾರೆ. ಯಾರು ಹೆಚ್ಚಾಗಿ ರೈತರನ್ನು ಹಿಂಸೆ ಮಾಡಿ ಹಣವನ್ನು ಸಂಗ್ರಹ ಮಾಡಿ ಕಳುಹಿಸುತ್ತಾರೆ ಅಂತವರಿಗೆ ಪ್ರಮೋಷನ್ ಕೊಡುತ್ತೀರಿ, ಯಾರು ಪಾಪ ಬಡವರು ಅಂತ ಕನಿಕರ ತೋರಿಸುತ್ತಾರೆಯೋ ಅಂತಹ ಡೆಪ್ಯೂಟಿ ಕಮಿಷನರುಗಳಿಗೆ ರೆವಿನ್ಯೂ ಆಫೀಸರುಗಳಿಗೆ ಪ್ರಮೋಷನ್ ಇಲ್ಲವೇ ಇಲ್ಲ. ಅದರ ಸಲುವಾಗಿ ಪ್ರತಿಯೊಬ್ಬರೂ ದಯಾದಾಕ್ಷಿಣ್ಯವನ್ನು ಬಿಟ್ಟು ಅತ್ಯಂತ ಕ್ರೂರತನದಿಂದ ಸರ್ಕಾರಕ್ಕೆ ಬರಬೇಕಾದಂತಹ ಕಂದಾಯ ವಸೂಲಿ ಅಥವಾ ಸಾಲದ ವಸೂಲಿಯನ್ನಾಗಲಿ ಮಾಡುತ್ತಾ ಇದ್ದಾರೆ. ಬಿಜಾಪುರ ಜಿಲ್ಲೆಯಂತೂ ಕಳೆದ 3-4 ವರ್ಷಗಳಿಂದ ಒಂದೇ ಸಮನೆ ಬರಗಾಲಕ್ಕೆ ತುತ್ತಾಗಿದೆ. ಇವತ್ತಿನ ದಿವಸ ಪರಿಸ್ಥಿತಿಯನ್ನು ಹೇಳಬೇಕಾದರೆ ಬಿಜಾಪುರ ಜಿಲ್ಲೆಯಲ್ಲಿ ಮುಂಗಾರು ಬೆಳೆ ಪೂರ್ತಿಯಾಗಿ ನಾಶವಾಗಿದೆ. ಮುಂಗಾರು ಮಳೆ ಹೋದ್ದರಿಂದ ಶೇಂಗಾ, ಹತ್ತಿ ಬೆಳೆಗಳೂ ಕೂಡ ಕಮರಿ ಹೋಗಿವೆ. ರೈತರ ಪರಿಸ್ಥಿತಿ ಬಹಳ ಗಂಭೀರವಾಗಿ ಬಹಳ ಚಿಂತಾಜನಕ ಪರಿಸ್ಥಿತಿಯುಂಟಾಗಿದೆ. ಹಳ್ಳಿಗಳಲ್ಲಿ ಜನರಿಗೆ ಜೋಳ ಅಥವಾ ಶೇಂಗಾ ಯಾವುದೂ ಕೂಡ ಆಹಾರ ಧಾನ್ಯ ಸಿಕ್ಕುತ್ತಿಲ್ಲ, ಬಡವರಿಗೆ ದುಡಿಯಲಿಕ್ಕೆ ಕೂಲಿ ಇಲ್ಲ, ಅದರ ಸಲುವಾಗಿ ಸರ್ಕಾರದವರು ತಕ್ಷಣ ಕಾಳನ್ನು ಕಳುಹಿಸಿಕೊಡಬೇಕೆಂದು ಮತ್ತು ರಿಲೀಫ್ ವರ್ಕ್ಸ್ ಶುರು ಮಾಡಬೇಕೆಂದು ಹೇಳುತ್ತೇನೆ. ಇಡೀ ತಾಲ್ಲೂಕಿನಲ್ಲಿ ಕನಕನಾಳ, ಹೊರ್ತಿಕೆರೆ ಮತ್ತು ಇಂಜಿನೇರಿ ಕೆರೆಗಳ ಕಾಂಗಾರಿ ಕೆಲಸಕ್ಕೆ 1967 ರಲ್ಲಿ ಮಂಜೂರು ಮಾಡಿ ಬಜೆಟ್ ಪ್ರೊವಿಷನ್ ಮಾಡಿದ್ದೀರಿ, ಇನ್ನೂವರೆಗೂ ಆ ಕೆಲಸ ಕಾರ್ಯಗಳನ್ನು ಶುರು ಮಾಡಿಲ್ಲ. ಸರ್ಕಾರದವರು ಆ ಬಗ್ಗೆ ಡೈರೆಕ್ಷನ್ ಕೊಡಲಿಲ್ಲವೋ ಏನೋ ತಿಳಿಯದು. ಅದರ ಸಲುವಾಗಿ ಈ 3 ಕೆರೆಗಳ ಕೆಲಸವನ್ನೂ ಈ ಕೂಡಲೇ ತೆಗೆದುಕೊಳ್ಳಬೇಕೆಂದು ವಿನಂತಿ ಮಾಡಿಕೊಳ್ಳುತ್ತಾ ಇದ್ದೇನೆ. ಅಲ್ಲಿ ಕಾರ್ಮಿಕರ ಜೀವನ ಬಹಳ ಕಷ್ಟ ಸ್ಥಿತಿಯಲ್ಲಿ ಇವೆ. ಬಿಜಾಪುರದಲ್ಲಿ ಜನನ ಪ್ರಮಾಣ ಪ್ರತಿ ಒಂದು ಸಾವಿರಕ್ಕೆ 36 ಪರ್ಸೆಂಟ್ ಇದೆ. ನಾವು ಪ್ರಮಾಣ ಪ್ರತಿ ಒಂದು ಸಾವಿರಕ್ಕೆ 15 ಪರ್ಸೆಂಟ್ ಇದೆ, ಈ ರೀತಿ ದಿನದಿನಕ್ಕೆ ಜನಸಂಖ್ಯೆ ಹೆಚ್ಚಾಗುತ್ತಾ ಇದೆ, ನಿರುದ್ಯೋಗ ಸಮಸ್ಯೆ ದಿನದಿನಕ್ಕೆ ಗಂಭೀರವಾಗುತ್ತಾ ಇದೆ. ಇದರ ಸಲುವಾಗಿ ನಾನು ಹೇಳುವುದೇನೆಂದರೆ ಬಿಜಾಪುರ ಜಿಲ್ಲೆಯಲ್ಲಿ ನೀರಾವರಿಯ ಅನುಕೂಲ ಬಹಳ ಕಡಿಮೆ ಇದೆ, ಮಳೆಯಂತೂ ಸುಮಾರು 10-12 ಇಂಚು ಅದೂ ಯಾವಾಗಲೋ 3-4 ವರ್ಷಕ್ಕೊಮ್ಮೆ ಬರುತ್ತದೆ, ಅದನ್ನು ನಂಬಿಕೊಂಡು ರೈತರು ಯಾವ ಆಧಾರದ ಮೇಲೆ ಒಕ್ಕಲುತನ ಮಾಡಬೇಕು? ಆದ್ದರಿಂದ ಈ ಬಿಜಾಪುರ ಜಿಲ್ಲೆಯಲ್ಲಿ ಇನ್ನಾದರೂ ಬರಗಾಲದಿಂದ ಮುಕ್ತ ಮಾಡುವುದಕ್ಕೆ

(ಶ್ರೀ ಎಸ್. ಎಸ್. ಅರಕೇರಿ)

ಇರುವ ಯೋಜನೆ ಎಂದರೆ ಅದು ಆಲಮಟ್ಟಿ ಎಂದು ಹೇಳುತ್ತೇನೆ. ಇಡೀ ದಕ್ಷಿಣ ಹಿಂದೂಸ್ಥಾನದಲ್ಲಿ ಆಲಮಟ್ಟಿಯಂತಹ ದೊಡ್ಡ ಯೋಜನೆ ಈಗ್ಗೆ ಅದನ್ನು ಮಾಡಬೇಕಾಗಿದೆ ಅದನ್ನು ತೆಗೆದುಕೊಂಡರೆ ಸುಮಾರು 20 ಲಕ್ಷ ಎಕರೆಗೆ ನೀರಾವರಿಯಾಗುತ್ತದೆ, ಇದನ್ನು ತೀವ್ರವಾಗಿ ಕಾರ್ಯಗತ ಮಾಡಿದ ಪಕ್ಷದಲ್ಲಿ ಉತ್ತರ ಕರ್ನಾಟಕದ ಬಿಜಾಪುರ ಜಿಲ್ಲೆ ಮತ್ತು ಗುಲ್ಬರ್ಗಾ ಡಿವಿಜನ್‌ಗೆಲ್ಲಾ ನೀರಾವರಿ ಯಾಗುತ್ತದೆ ಎಂದು ಹೇಳಿದಾಗಲೂ ಕೂಡ ಇವತ್ತಿನ ದಿವಸ ನಮ್ಮ ರಾಜ್ಯ ಸರ್ಕಾರದವರು ರಾಜ ಕೀಯ ತಂತ್ರ ಹೂಡಿ ನಾರಾಯಣಪುರದಲ್ಲಿ ಮಾಡುತ್ತೇವೆ ಎಂದು ಹೇಳುತ್ತಾ ಇದ್ದಾರೆ. ನಾರಾ ಯಣಪುರದಲ್ಲೂ ಮಾಡದೆ, ಆಲಮಟ್ಟಿಯಲ್ಲೂ ಮಾಡದೆ ಕೈ ಬಿಟ್ಟಿದ್ದಾರೆ. ಲಾಲ್ ಬಹದ್ದೂರ್ ಶಾಸ್ತ್ರಿಗಳು ಹಿಂದೆ ಅಲ್ಲಿಗೆ ಬಂದು ಅಲ್ಲಿ ಶಂಕುಸ್ಥಾಪನೆ ಮಾಡಿದಂತಹ ಸ್ಥಳದಲ್ಲಿ ಇವತ್ತಿನ ದಿವಸ ಬರೀ ಕಲ್ಲು ಇದೆಯೇ ವಿನಾ ಮತ್ತೆ ಯಾವ ಕೆಲಸವೂ ಕೂಡ ಆಗಿಲ್ಲ. ಇದುವರೆಗೂ ಕೂಡ ಸರ್ಕಾ ರದವರಾಗಲಿ ಮಾನ್ಯ ಮಂತ್ರಿಗಳಾಗಲಿ ಬಿಜಾಪುರ ಜಿಲ್ಲೆಗೆ ಸಾಕಷ್ಟು ಗಮನ ಕೊಟ್ಟಿಲ್ಲ. ಇವತ್ತಿನ ದಿವಸ ಈ ಯೋಜನೆಯನ್ನು ಆಲಮಟ್ಟಿಯಲ್ಲೂ ಬಿಟ್ಟು ನಾರಾಯಣಪುರದಲ್ಲೂ ಬಿಟ್ಟು ಸಿದ್ದಾಪುರ ದಲ್ಲಿ ಮಾಡಲು ಕೆಲಸ ಕಾರ್ಯಗಳನ್ನು ಶುರು ಮಾಡಿದ್ದಾರೆ ಎಂದು ತಿಳಿದುಬಂದಿದೆ. ನಾರಾ ಯಣಪುರದಲ್ಲಿ ಖರ್ಚು ಮಾಡಿದ ಹಣ ಎಲ್ಲಿ ಹೋಯಿತು ? ಆಲಮಟ್ಟಿಯಲ್ಲಿ ಹಾಕಿದ ಹಣ ಎಲ್ಲಿ ಹೋಯಿತು ? ಹೊಸದಾಗಿ ಸಿದ್ದಾಪುರದಲ್ಲಿ ಶುರು ಮಾಡಲು ಕಾರಣವೇನು ? ಒಂದು ಸಲ ನಾರಾಯಣಪುರದಲ್ಲಿ ಮಾಡುತ್ತೇವೆ ಎನ್ನುವುದು ಒಂದು ಸಲ ಆಲಮಟ್ಟಿಯಲ್ಲಿ ಮಾಡುತ್ತೇವೆ ಎನ್ನುವುದು ಇದೆಂತಹ ನೀತಿ ! ನಾಯಿ ಉಚ್ಚೆ ಹುಯ್ಯುವುದಕ್ಕೆ ಹೋದಾಗ ಪ್ರತಿಯೊಂದು ಜಾಗ ವನ್ನೂ ಮೂಸಿ ಮೂಸಿ ನೋಡಿ ಕೊನೆಗೆ ಎಲ್ಲೋ ಒಂದು ಕಡೆ ತನ್ನ ಮನಸ್ಸಿಗೆ ಬಂದಲ್ಲಿ ಉಚ್ಚೆ ಹುಯ್ಯುತ್ತದೆಯಂತೆ, ಇದು ಆ ರೀತಿ ಸರಕಾರದ ನೀತಿ ಆಗಿದೆ. ಅದರ ಸಲುವಾಗಿ ಸರ್ಕಾರದ ವರಲ್ಲಿ ವಿನಂತಿಸಿಕೊಳ್ಳುತ್ತಾ ಇದ್ದೇನೆ, ವಿಜಾಪುರದಲ್ಲಿ ಬರಗಾಲ ಬರದಂತೆ ಮಾಡಬೇಕಾದರೆ ಆಲಮಟ್ಟಿ ಒಂದೇ ಒಂದು ಉಪಾಯ ಎಂದು ಹೇಳಿ ಈ ಸಂದರ್ಭದಲ್ಲಿ ಕಳಕಳಿಯಿಂದ ಹೇಳುತ್ತಾ ಇದ್ದೇನೆ.

12-30 P. M.

ಇದರ ಸಲುವಾಗಿ ಬಿಜಾಪುರ ಜಿಲ್ಲೆಯಲ್ಲಿ ಆಲಮಟ್ಟಿ ಯೋಜನೆಯನ್ನು ತೆಗೆದುಕೊಂಡು ನೀರಾವರಿ ಸೌಕರ್ಯ ಕಲ್ಪಿಸಿಕೊಟ್ಟರೆ ಅನುಕೂಲವಾಗುತ್ತದೆ. ಅದನ್ನು ತೆಗೆದುಕೊಳ್ಳಬೇಕು, ಹೊರ್ತಿ ಕೆರೆ, ಕನಕನಾಳ ಕೆರೆ ಮುಂತಾದುವುಗಳನ್ನು ತೆಗೆದುಕೊಳ್ಳಬೇಕು, ಉಳಿದ ರಸ್ತೆ ಕೆಲಸ, ಬಾವಿ ಕೆಲಸ ಮುಂತಾದ ರಿಲೀಫ್ ಕೆಲಸಗಳನ್ನು ಕೈಕೊಳ್ಳಬೇಕು ಎಂದು ವಿನಂತಿಮಾಡಿ ಮಾತನಾಡಲು ಅವಕಾಶವಿತ್ತ ಅಧ್ಯಕ್ಷರಿಗೆ ವಂದಿಸಿ ನನ್ನ ಭಾಷಣವನ್ನು ಮುಗಿಸುತ್ತೇನೆ.

ಶ್ರೀಮತಿ ಚಂಪಾಬಾಯಿ ಭೋಗಲೆ (ಕಾಗೇವಾಡ).—ಈ ದುಷ್ಕಾಲ ಪರಿಸ್ಥಿತಿ 5 ವರ್ಷ ಗಳಿಂದ ಇದೆ. ಕೇಂದ್ರ ಸರಕಾರದ ಮಲತಾಯಿ ಧೋರಣೆಯಿಂದ ಅವರು ನೀರಾವರಿ ಯೋಜನೆ ಗಳಿಗೆ ಹಣ ಕೊಡದಿರುವುದರಿಂದ ಕಠಿಣ ಪರಿಸ್ಥಿತಿ ಪ್ರಾಪ್ತವಾಗಿದೆ. ದೇವರು ಎಷ್ಟು ಕೋಪ ಮಾಡಿಕೊಂಡಿದ್ದಾನೋ ಗೊತ್ತಾಗುವುದಿಲ್ಲ, ಮನುಷ್ಯರು ಪಾಪ ಮಾಡಿರಬೇಕೆಂದು ಕಾಣುತ್ತದೆ. ಸರ ಕಾರ ಮಾಡಿರುವ ತಪ್ಪಿಗೂ ಜನರು ಕಷ್ಟಕ್ಕೊಳಗಾಗಿದ್ದಾರೆ. 5 ವರ್ಷಗಳಿಂದ ದುಷ್ಕಾಲ ಪರಿಸ್ಥಿತಿ ಇರುವಾಗ ಕೇಂದ್ರ ಸರಕಾರ ಮಲತಾಯಿ ಧೋರಣೆ ಅನುಸರಿಸುತ್ತಿದೆ. ಮೈಸೂರು ಸರಕಾರ ದವರೂ ಪ್ರತಿಯೊಂದನ್ನೂ ಅಭಿವೃದ್ಧಿ ಮಾಡುತ್ತಾ ಹಿಂದೂಸ್ತಾನದಲ್ಲಿ ಮೈಸೂರು ಹೆಸರುವಾಸಿ ಯಾಗಿರುವಾಗ ಅದರ ಹೆಸರಿಗೆ ಕಳಂಕ ತರಬೇಕೆಂದು ಇಂಡಿಯಾ ಸರಕಾರ ಒಂದು ರೀತಿಯ ಧೋರಣೆಯನ್ನು ಅನುಸರಿಸುತ್ತಿರುವಂತೆ ಕಾಣುತ್ತದೆ. ಇನ್ನು ಮುಂದಾದರೂ ಕೂಡ ಇಂಡಿಯಾ ಸರಕಾರದವರು ನಮ್ಮ ಕೂಗನ್ನು ಕೇಳಿ ಇಲ್ಲಿಯ ಪರಿಸ್ಥಿತಿಯನ್ನರಿತು ನಮಗೆ ಹೆಚ್ಚು ಸಹಾಯ ಮಾಡಲಿ, ಅದಕ್ಕೆ ಒತ್ತಾಯಮಾಡಬೇಕು ಎಂದು ಸಲಹೆಮಾಡುತ್ತೇನೆ.

ನಮ್ಮ ಕಡೆ ಸರಿಯಾಗಿ ಬೆಳೆಯಾಗಿಲ್ಲ, ಬಿತ್ತಿದ ಬೆಳೆ ಕೈಗೆ ಬರುವಂತಿಲ್ಲ. ಕೆಲವು ಕಡೆ ಬಿತ್ತನೆಯೇ ಆಗಿಲ್ಲ. ರಾಯಬಾಗ್ ಮತ್ತು ಅಥಣಿ ತಾಲ್ಲೂಕಿನಲ್ಲಿ ಬಿತ್ತನೆಯಾಗಿಲ್ಲ. 60 ಮೈಲಿಯಲ್ಲಿ ಕೃಷ್ಣಾನದಿ ಹರಿಯುವುದು. ಅಲ್ಲಿ ವಿದ್ಯುಚ್ಛಕ್ತಿಯನ್ನೊದಗಿಸಿದ್ದರೆ ಹೈಬ್ರಿಡ್ ಜೋಳ ಬೆಳೆಯಲು ಅನುಕೂಲವಾಗುತ್ತಿತ್ತು. ಇದು ಗಡಿ ಪ್ರದೇಶ. 20 ವರ್ಷದಿಂದಲೂ ಆ ಕಡೆ ಲಕ್ಷ್ಯ ಕೊಟ್ಟಿಲ್ಲ. ಇದರಿಂದ ರೈತರು ಕಷ್ಟವನ್ನನುಭವಿಸಬೇಕಾಗಿದೆ. ಅಲ್ಲಿನ ಪರಿಸ್ಥಿತಿ ಚಿಂತಾಜನಕ

ವಾಗಿದೆ. ಕೊಯನಾ ಪ್ರಾಜೆಕ್ಟಿನಿಂದ ತೊಂದರೆಯಾಗುತ್ತದೆ ಎಂದು ಮನೆಯಲ್ಲಿದ್ದ ಜೋಳ ಮುಂತಾದ್ದನ್ನೆಲ್ಲಾ ಮಾರಿದ್ದಾರೆ, ಕೊಯನಾ ಅಣೆಕಟ್ಟು ಒಡೆದರೆ ಎಲ್ಲವೂ ಕೊಚ್ಚಿಹೋಗುವು ದೆಂದು ಜನರು ಹೆದರಿ ಆ ರೀತಿ ಮಾಡಿದ್ದಾರೆ. ನಮ್ಮ ಸರಕಾರದವರು ಅಭಾವ ಪ್ರದೇಶಗಳಲ್ಲಿ ಜನರಿಗೆ ಕೆಲಸ ದೊರೆಯಲು ರಸ್ತೆಗಳನ್ನು ಮಾಡಿಸುತ್ತಿದ್ದಾರೆ. ಆದರೆ ಒಬ್ಬನಿಗೆ 10 ಆಣೆ ಮಾತ್ರ ಕೂಲಿ ಕೊಡುತ್ತಿದ್ದಾರೆ ಅದನ್ನು ಹೆಚ್ಚಿಸಬೇಕು.

ಈಗಾಗಲೆ ಸಣ್ಣಸಣ್ಣ ಡ್ಯಾಂ ಹತ್ತು ಮಾಡಿದ್ದಾರೆ, ಪ್ರತಿ ವರ್ಷ ಎರಡು ಇರಿಗೇಷನ್ ಕಾರ್ಯ ಮಾಡಿದರೆ ಸಾಕಷ್ಟು ಉತ್ಪತ್ತಿಮಾಡಬಹುದು, ರೈತರಿಗೂ ಸೌಕರ್ಯವಾಗುವುದು. ಆ ರೀತಿ ಮಾಡಬೇಕು. ಮೂರೂವರೆ ಕೋಟಿ ರೂಪಾಯಿಗಳ ಖರ್ಚಿಗೆ ಅಂದಾಜಾಗಿದೆ. ಪ್ರತಿ ವರ್ಷ ಒಂದು ಕೋಟಿ ರೂಪಾಯಿ ಕೆಲಸಮಾಡಿದರೂ ಅಥಣಿ ತಾಲ್ಲೂಕು ಪ್ರದೇಶದಲ್ಲಿ ಪೂರ್ಣವಾಗಿ ಇರಿಗೇಷನ್ ಆಗುವುದು ಎಂದು ವಿನಂತಿಮಾಡುತ್ತೇನೆ. ಈಗ ರಾಯಬಾಗ್ ಪ್ರದೇಶದ ಮಂತ್ರಿ ಗಳಿದ್ದಾರೆ. ಅದಕ್ಕೆ ಅವರು ಮಾಡಬೇಕಾದ ಕೆಲಸ ನಾವು ಮಾಡಬೇಕಾಗಿದೆ. ನಮ್ಮ ಪ್ರದೇಶದಲ್ಲೇನು ಕೆಲಸವಾಗಬೇಕೆಂದು ಮುಖ್ಯಮಂತ್ರಿಗಳಿಗೆ ಮನವಿ ಸಲ್ಲಿಸಲಾಗಿದೆ. ನಮ್ಮಲ್ಲಿ ಕೆಲವು ಕಡೆ ಹಳ್ಳ ಗಳಿವೆ, ಆ ಪ್ರದೇಶದಲ್ಲಿ ಸಣ್ಣ ಬಾವಿಗಳನ್ನು ತೆಗೆದು ಇರಿಗೇಷನ್ ಮಾಡಲು ಸೌಕರ್ಯಮಾಡಿ ಕೊಟ್ಟರೆ ಅನುಕೂಲವಾಗುವುದು. ಸರಕಾರ ಈಗ ಪ್ರತಿಯೊಂದು ಯೋಜನೆಗೂ ಹಣ ಖರ್ಚು ಮಾಡಲು ಕೊಟ್ಟಿದೆ, ಅದರಲ್ಲಿ ಪ್ರತಿಯೊಂದು ಯೋಜನೆಯಲ್ಲೂ ಸ್ವಲ್ಪ ಹಣ ತೆಗೆದು ವಿದ್ಯುಚ್ಛಕ್ತಿಯ ಸಹಾಯಪಡೆದು ಇರಿಗೇಷನ್ ಮಾಡಲು ಹೆಚ್ಚು ಸೌಕರ್ಯಮಾಡಿಕೊಡಬೇಕು, ಕೇಂದ್ರ ಸರಕಾರ ಹಣ ಸಾಕಷ್ಟು ಕೊಡದಿದ್ದರೆ ಹಾಗೆ ಮಾಡಬಹುದು. ಇರಿಗೇಷನ್ ಮತ್ತು ವಿದ್ಯುಚ್ಛಕ್ತಿ ಪಂಪು ಸೆಟ್ಟುಗಳ ಬಗ್ಗೆ ಹೆಚ್ಚು ಪ್ರೋತ್ಸಾಹ ಕೊಟ್ಟರೆ ಬರಗಾಲವನ್ನು ತಡೆಯಬಹುದು. ಈ ರೀತಿ ಮಾಡುವರೆಂದು ಆಶಿಸುತ್ತೇನೆ. ರೈತರಿಗೆ ಬಹಳ ಕಷ್ಟ ಬಂದಿರುವುದರಿಂದ 8-10 ದಿವಸಗಳಲ್ಲಿ ಪರಿಹಾರ ಕಾಮಗಾರಿಗಳನ್ನು ಪ್ರಾರಂಭಿಸಬೇಕೆಂದು ವಿನಂತಿಮಾಡಿಕೊಳ್ಳುತ್ತೇನೆ. ತಕಾವಿ ಸಾಲ ಕೊಡುವುದಕ್ಕೆ ವ್ಯವಸ್ಥೆಮಾಡಬೇಕು. ಆಫೀಸರುಗಳು ಆರೇಳು ಸಲ ಹೋದರೂ ಸಿಕ್ಕುವುದಿಲ್ಲ. ಆದುದರಿಂದ ತಾಸಿಲ್ದಾರರೊಬ್ಬರಿಗೆ ಅರ್ಜಿ ತೆಗೆದುಕೊಳ್ಳಲು ಅವಕಾಶ ಕೊಡಬೇಕು. ಇಲ್ಲದೆ ಹೋದರೆತೊಂದರೆಯಾಗುವುದು. ತಕ್ಕ ಸಹಾಯ ಮಾಡದಿದ್ದರೆ ಜನರೇ ಜನರನ್ನು ತಿನ್ನುವ ಕಾಲ ಬರುತ್ತದೆ. ನಮ್ಮ ಪ್ರದೇಶ ಹಿಂದುಳಿದ ಪ್ರದೇಶ. ಅಲ್ಲಿ ಸಾಕಷ್ಟು ಕೆಲಸವಾಗದಿದ್ದರೆ ನಾವು ಹಳ್ಳಿ ಗಳಿಗೆ ಹೋಗುವುದಕ್ಕೆ ಕಷ್ಟವಾಗುತ್ತದೆ. ಆದುದರಿಂದ ಜಾಗ್ರತೆ ಪರಿಹಾರ ಕಾರ್ಯ ಕೈಗೊಳ್ಳ ಬೇಕು. ಈಗಾಗಲೇ ಈ ಬಗ್ಗೆ ಮುಖ್ಯಮಂತ್ರಿಗಳಿಗೆ ಅರ್ಜಿ ಕೊಟ್ಟಿದ್ದೇನೆ. ಅದನ್ನು ನೋಡಿ ಕಾರ್ಯಗತಮಾಡಬೇಕು. ಶ್ರೀ ದೊಡ್ಡಮೇಟಿಯವರು ಪ್ರವಾಸಮಾಡಿ ನಮ್ಮ ಪ್ರದೇಶದಲ್ಲಿ ಸಾಧ್ಯವಾದಷ್ಟು ಕೆಲಸಗಳನ್ನು ಮಾಡಿಕೊಡಬೇಕು ಎಂದು ವಿನಂತಿಮಾಡುತ್ತೇನೆ.

ಶ್ರೀ ಜಿ. ದುಗ್ಗಪ್ಪ (ಧರ್ಮಸಾಗರ).—ಸಭೆಯ ಮುಂದೆ ಮುಖ್ಯಮಂತ್ರಿಗಳು ಪ್ರಸ್ತಾವನೆ ಯನ್ನಿಟ್ಟಿದ್ದಾರೆ. ರಾಜ್ಯದ ಬಹಳ ಪ್ರದೇಶಗಳಲ್ಲಿ ಉಂಟಾಗಿರುವ ಅಭಾವ ಪರಿಸ್ಥಿತಿ ಮತ್ತು ಅದಕ್ಕಾಗಿ ಕೈಕೊಳ್ಳಬೇಕಾಗಿರುವ ಕ್ರಮಗಳು ಈ ವಿಚಾರದಲ್ಲಿ ಕೆಲವು ಮಾತುಗಳನ್ನು ಹೇಳುತ್ತೇನೆ. ಸರಕಾರದವರು ನಿಜ ಪರಿಸ್ಥಿತಿಯನ್ನು ತಿಳಿಸಿದ್ದಾರೆ. ಮುಖ್ಯಮಂತ್ರಿಗಳು ಮೂರನೆಯ ತಾರೀಖು ತಮಗೆ ತಿಳಿದಿರುವುದನ್ನು ಪ್ರಸ್ತಾಪಿಸಿದ್ದಾರೆ, ಆ ತಾರೀಖಿನವರೆಗೆ ಪರಿಸ್ಥಿತಿಯೇನಿತ್ತು ಎಂಬುದನ್ನು ಅಧಿಕಾರಿಗಳಿಂದ ತಿಳಿದುಕೊಂಡು ವರದಿ ಸಿದ್ಧಮಾಡಿದ್ದಾರೆಂದು ನಾನು ನಂಬಿದ್ದೇನೆ. ಮಳೆ ಯಿಲ್ಲದೆ ಮುಖ್ಯವಾಗಿ ಚಿತ್ರದುರ್ಗ, ಚಳ್ಳಕೆರೆ, ಹೊಸದುರ್ಗ, ಜಗಳೂರು, ಹಿರಿಯೂರು, ಮೊಳಕಾಲ್ಮೂರು ತಾಲ್ಲೂಕುಗಳಲ್ಲಿ ಅಭಾವ ಪರಿಸ್ಥಿತಿ ಉಂಟಾಗಿರುವುದನ್ನು ತಿಳಿಸಿದ್ದಾರೆ. ಈ ತಾಲ್ಲೂಕುಗಳಲ್ಲಿ ಬಡವರು ಎರಡಲ್ಲ-ಮೂರು ದಿವಸಗಳಿಗೊಂದು ಸಲ ಊಟ ಮಾಡುತ್ತಿದ್ದಾರೆ. ಮಕ್ಕಳಿಗೆ ಸಹ ಆಹಾರವಿಲ್ಲದೆ, ಕುಡಿಯುವುದಕ್ಕೆ ನೀರಿಲ್ಲದೆ ಕಷ್ಟವಾಗಿದೆ. ನಿಜವಾಗಿಯೂ ಸೂಕ್ಷ್ಮ ವಾಗಿ ಇರುವ ಪರಿಸ್ಥಿತಿಯನ್ನು ಹೇಳುವುದಾದರೆ ಬಿತ್ತನೆಮಾಡಿರುವ ಪೈರು ಇಂದು ಒಣಗುತ್ತಿದೆ, ರೈತರ ಮಕ್ಕಳಿಗೆ ಸಹ ಅನ್ನವಿಲ್ಲದೆ ಸಾಯುವ ಪರಿಸ್ಥಿತಿ ಇದೆ. ಬಿತ್ತಿದ ಬೆಳೆ ಬೇಸಿಗೆಯಲ್ಲಿ ಆಗು ವಂತೆ ಮಳೆ ಇಲ್ಲದೆ ಒಣಗಿ ಹೋಗುವುದನ್ನು ಕಣ್ಣಿನಿಂದ ನೋಡುವುದಕ್ಕಾಗುವುದಿಲ್ಲ. ಇಂಥ ಪರಿಸ್ಥಿತಿಯನ್ನು ನಾವು ಇದುವರೆಗೂ ನೋಡಿಲ್ಲ. ಅನೇಕ ಕಡೆ ಒಂದು ಕಾಳನ್ನೂ ಬಿತ್ತಿಲ್ಲ. ಮೂರನೆಯದಾಗಿ ವಾಣಿವಿಲಾಸ ಸಾಗರ ಪ್ರದೇಶದಲ್ಲಿ ಇವೊತ್ತಿನವರೆಗೂ ನಂದನವನವಾಗಿದ್ದ ಪ್ರದೇಶ ಏನಾಗಿದೆ ಎಂದರೆ ನೀರಿಲ್ಲದೆ ತೆಂಗಿನ ತೋಟ, ಅಡಕೆ ತೋಟ ಗದ್ದೆಗಳೆಲ್ಲ ಹಾಳಾಗಿ ಹೋಗುತ್ತಿವೆ. ಇದನ್ನು ಸರ್ಕಾರದ ಗಮನಕ್ಕೆ ಏಕೆ ತರುತ್ತಿದ್ದೇನೆಂದರೆ ಅವರ ರಿಪೋರ್ಟ್ ಏನಿದೆ ಅದು ಲೋಕಾಭಿರಾಮವಾಗಿದೆ. ಈ ವಿಷಯವನ್ನು ನಾನು ಹೇಳಿದರೆ ಉತ್ಪ್ರೇಕ್ಷೆಯಾಗಿ ಕಾಣಬಹುದು. ಆದರೆ ಅದು ಉತ್ಪ್ರೇಕ್ಷೆಯಲ್ಲ, ನಿಜವಾದ ಪರಿಸ್ಥಿತಿಯನ್ನು ನಾನು ನಿವೇದನೆ ಮಾಡುತ್ತಿದ್ದೇನೆ. ಅಲ್ಲಿ ಗದ್ದೆಗಳೆಲ್ಲ ಒಣಗಿ ಹೋಗುತ್ತಿವೆ. ಇದು ಒಂದು ಚಿತ್ರ.

(ಶ್ರೀ ಜಿ. ದುಗ್ಗಪ್ಪ)

ಇದರ ಜೊತೆಗೆ ಸರ್ಕಾರದವರು ಮಾಡಿರುವ ಒಂದು ತೊಂದರೆ ಇದೆ. ಅದೇನೆಂದರೆ ಸರ್ಕಾರದ ನೀತಿಯಿಂದಾಗಿ ಕಂದಾಯದ ಬಗ್ಗೆ ಒಂದು ನಿರ್ದಿಷ್ಟವಾದ ನೀತಿಯನ್ನು ಆಚರಣೆಗೆ ತರಲಿಲ್ಲವಾಗಿ ಮೂರು ವರ್ಷದಿಂದ ಬಾಕಿ ಇದ್ದ ಕಂದಾಯವನ್ನು ಇಂಥ ಬರಗಾಲದಲ್ಲಿ ವಸೂಲು ಮಾಡಬೇಕೆಂದು ಹೊರಟಿದ್ದಾರೆ. ಹಿಂದೆ ರೆವೆನ್ಯೂ ಮಂತ್ರಿಗಳಾಗಿದ್ದು ಈಗ ವ್ಯವಸಾಯ ಮಂತ್ರಿಗಳಾಗಿರುವವರು ಹೇಳಿದ್ದರು, ಕೆಲವು ಕಡೆ ರೆಮಿಷನ್ ಕೊಟ್ಟಿದ್ದೇನೆ, ಕೆಲವು ಕಡೆ ಕೊಟ್ಟಿಲ್ಲ ಎಂದು. ಚಿತ್ರದುರ್ಗ ಜಿಲ್ಲೆಯ ಪರಿಸ್ಥಿತಿಯನ್ನು ಹೇಳುವುದಾದರೆ, ಅಂಕಿಅಂಶಗಳ ಸಹಿತ ಹೇಳಬೇಕಾದರೆ ಸರ್ಕಾರ ದವರು ಒದಗಿಸಿರುವ ಪುಸ್ತಕದಲ್ಲಿ ಈ ರೀತಿ ಹೇಳಿದ್ದಾರೆ :

> "Chitradurga—No remission has been granted; no suspension has been given; no postponement of land revenue collection has been made."

The memorandum was presented to the Central Study Team headed by Sri D. D. Sathe on 19th, 20th and 21st June, 1968.

ಶ್ರೀ ಬಿ. ಎಲ್. ಗೌಡ (ಸಹಕಾರ ಶಾಖೆಯ ಉಪಮಂತ್ರಿಗಳು).—ಈಚೆಗೆ ಮಾಡಿದ್ದಾರೆ.

ಶ್ರೀ ಜಿ. ದುಗ್ಗಪ್ಪ.— ಯಾವಾಗ ರೆಮಿಷನ್ ಕೊಡುವುದು ? ಯಾವಾಗ ಭೂಕಂದಾಯದ ವಸೂಲಿ ಪ್ರಾರಂಭವಾಗುವುದು ; ಯಾವಾಗ ರಿಮಿಷನ್ ಕೊಡಬೇಕು ? ಯಾವಾಗ ಪರಿಹಾರ ವನ್ನು ಕೊಡಬೇಕಾಗಿತ್ತು ? ಜೂನ್ ತಿಂಗಳ ಕೊನೆಯಲ್ಲಿ ಹೇಳುತ್ತಾರೆ, 'ಇವೊತ್ತಿನವರೆಗೂ ಸರ್ಕಾರ ಯಾವ ವಿಧವಾದ ಪರಿಹಾರವನ್ನೂ ಕೊಟ್ಟಿಲ್ಲವೆಂದು. ಮಾನ್ಯ ಉಪಮಂತ್ರಿಗಳು ಹೇಳು ತ್ತಾರೆ, ಈಚೆಗೆ ಮಾಡಿದೆ ಎಂದು. ಇದರಿಂದ ಸರ್ಕಾರ ಯಾವ ವಿಧವಾದ ನಿರ್ದಿಷ್ಟವಾದ ನೀತಿ ಯನ್ನೂ ಅನುಸರಿಸಿಲ್ಲ ಎನ್ನುವುದು ವೇದ್ಯವಾಗುತ್ತದೆ. ಇವೊತ್ತು ನನ್ನದೇ ಒಂದು ಉದಾಹರಣೆ ಯನ್ನು ಕೊಡುವುದಾದರೆ ನಾನು 5 ರೂಪಾಯಿ 14 ಆಣೆ ಕಂದಾಯ ಕೊಡುತ್ತಿದ್ದೆ. ಇತ್ತೀಚೆಗೆ ಸೆಕ್ರೆಟರಿ ಬಂದು ಹೇಳುತ್ತಾರೆ, ನಾನು 196 ರೂಪಾಯಿ ಕೊಡಬೇಕು ಎಂದು. ವಾಟರ್ ರೇಟ್ ಜಾಸ್ತಿಯಾಗಿದೆ, ಒಂದು ಎಕರೆಗೆ 20 ರೂಪಾಯಿ ಆಗಿದೆ, ಮೂರು ವರ್ಷಕ್ಕೆ ಮೂರು ಎಕರೆಗಳಿಗೆ 180 ರೂಪಾಯಿ ಆಯಿತು, ಸೆಸ್ ವಗೈರೆ ಸೇರಿದರೆ 196 ರೂಪಾಯಿ ಆಗುತ್ತದೆ, ಅದನ್ನು ಕೊಡ ಬೇಕು ಎಂದು ಕೇಳಿದಾಗ ನಾನು ಕೊಡುವುದಕ್ಕಾಗುವುದಿಲ್ಲ ಎಂದು ಹೇಳಿದೆ. ಆತ ನಿಮ್ಮಂಥವರೇ ಹೀಗೆ ಹೇಳಿದರೆ ಹೇಗೆ ಎಂದು ಕೇಳಿದ. ತೋಟದಲ್ಲಿರುವ ಬಾವಿಗಳಲ್ಲಿ ನೀರಿಲ್ಲ, ಫಸಲು ಒಣಗಿ ಹೋಗುತ್ತಿದೆ. 5 ರೂಪಾಯಿ 14 ಆಣೆ ಕೊಡತಕ್ಕ ಒಬ್ಬ ಮನುಷ್ಯ 196 ರೂಪಾಯಿ ಕಂದಾಯ ವನ್ನು ಕೊಡಬೇಕು ಎಂದರೆ, ಸರ್ಕಾರದ ನೀತಿ ಈ ರೀತಿ ಆದರೆ ರೈತನ ಪರಿಸ್ಥಿತಿ ಏನಾಗಬೇಕು, ಅದರಲ್ಲಿಯೂ ಇಂತಹ ಬರಗಾಲದಲ್ಲಿ ಅವನ ಸ್ಥಿತಿ ಏನು ಎನ್ನುವುದನ್ನು ಯೋಚನೆ ಮಾಡಬೇಕು. ಇದು ಗಾಯದ ಮೇಲೆ ಬರೆ ಎಳೆದಂತಾಗುತ್ತಿದೆ. ಸಾಮಾನ್ಯ ಜನತೆಯ ಸ್ಥಿತಿ ಏನು ಎನ್ನುವುದನ್ನು ನೋಡಬೇಕು ಸರ್ಕಾರದವರು ಒಂದು ಮಾತನ್ನು ಹೇಳಿದ್ದಾರೆ :

> "these measures have been adopted to the maximum extent possible".

ಬೆಂಗಳೂರು ಡಿವಿಜನ್‌ನಲ್ಲಿ ಸುಮಾರು 32,50,000 ರೂಪಾಯಿಗಳನ್ನು ಕಾಮಗಾರಿಗಳಿಗೆ ಖರ್ಚು ಮಾಡುವುದಕ್ಕಾಗಿ ಒದಗಿಸಿದ್ದಾರೆ. ಬೆಂಗಳೂರು ಡಿವಿಜನ್‌ನಲ್ಲಿ 4 ಜಿಲ್ಲೆಗಳಿದ್ದು 41 ತಾಲ್ಲೂಕುಗಳೂ, 186 ಹೋಬಳಿಗಳೂ, 8,722 ಹಳ್ಳಿಗಳೂ ಇವೆ. ಸಾಮಾನ್ಯವಾಗಿ ಹಳ್ಳಿಗಾಡಿ ನಲ್ಲಿ ವಾಸ ಮಾಡುವ ಜನಸಂಖ್ಯೆಯಾದರೂ ಒದಗಿಸಿರುವ ಅಂಕಿ ಅಂಶಗಳ ಪ್ರಕಾರ 45.95,369. ಇಷ್ಟು ಜನಗಳಿಗಾಗಿ ಒದಗಿಸಿರುವ ಹಣ 32 ಲಕ್ಷ ರೂಪಾಯಿ. ಒಬ್ಬ ವ್ಯಕ್ತಿಗೆ ಒಂದು ರೂಪಾಯಿ ಕೂಡ ಬರುವುದಿಲ್ಲ. ವರ್ಕಿಂಗ್ ಕ್ಲಾಸ್ ಆಫ್ ದಿ ಪಾಪ್ಯುಲೇಷನ್ ಎಂದರೆ ಕಷ್ಟಪಟ್ಟು ಕೆಲಸ ಮಾಡತಕ್ಕ ಜನರ ಲೆಕ್ಕವನ್ನು ತೆಗೆದುಕೊಂಡರೆ 45 ಲಕ್ಷವಾಗುತ್ತದೆ. ಇಷ್ಟು ಜನಗಳಿಗೆ 32 ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದಾರೆ. ಏನಾದರು ಒಂದು ಒಳ್ಳೆಯ ಕೆಲಸವನ್ನು ಮಾಡಿದರೆ ಮಾಡಿದ್ದಾ ರೆಂದು ಹೇಳುತ್ತೇವೆ. ಬರೀ ಟೀಕೆ ಮಾಡುವುದಿಲ್ಲ. ಚಿತ್ರದುರ್ಗ ಜಿಲ್ಲೆಯಲ್ಲಿ ಜನಗಳು ಜೀವ ಹಿಡಿದುಕೊಂಡಿರುವ ವಿಷಯ ತಮಗೂ ಗೊತ್ತು, ಮಾನ್ಯ ಬಿ. ಎಲ್. ಗೌಡರಿಗೂ ಗೊತ್ತು. ಸಾಯಿಲ್ ಕನ್‌ಸರವೇಷನ್ ಕೆಲಸ ಬಹಳ ಚೆನ್ನಾಗಿ ನಡೆಯುತ್ತಿದೆ, ಅದರಿಂದ ಇವೊತ್ತು ಜನ ಸ್ವಲ್ಪ

ಜೀವ ಹಿಡಿದುಕೊಂಡಿದ್ದಾರೆ. ಇದೂ ಸಹ ಸಾಲದಾಗಿದೆ. ವಾಣಿವಿಲಾಸ ಸಾಗರ ಅಚ್ಚು ಕಟ್ಟು ಪ್ರದೇಶದ ಜನರು ಕಂಗಾಲಾಗಿ ಚಿತ್ರದುರ್ಗ ತಾಲ್ಲೂಕಿನಿಂದ ಹಿರಿಯೂರು ತಾಲ್ಲೂಕಿನವರೆಗೆ ಹಳ್ಳಿಗಳಲ್ಲಿರುವ ಮುಕ್ಕಾಲು ಭಾಗದ ಜನ ಹರಿಹರ, ದಾವಣಗೆರೆ, ಭದ್ರ ನಾಲೆ ಪ್ರದೇಶ, ಭದ್ರಾವತಿ ಈ ಕಡೆಗಳಿಗೆ ವಲಸೆ ಹೋಗುತ್ತಿದ್ದಾರೆ. ದಾವಣಗೆರೆಯಲ್ಲಿ ಫುಟ್‌ಪಾತ್ ಮೇಲೆ ಮತ್ತು ಇತರ ಕಡೆ ಇರುವ ಜನರನ್ನು ಯಾವ ಕಡೆಯಿಂದ ಬಂದವರು ಎಂದರೆ ಮೂಡಲು ಕಡೆಯಿಂದ ಬಂದಿದ್ದೇವೆ ಎಂದು ಹೇಳುತ್ತಾರೆ. ಇಂಥ ಪರಿಸ್ಥಿತಿ ಇದೆ. ಇದನ್ನು ನಿವಾರಿಸಲು ಯಾವ ಕಾರ್ಯಕ್ರಮವನ್ನು ತೆಗೆದುಕೊಂಡಿದ್ದೀರಿ ? ಕ್ಷಾಮ ಡಾಮರಗಳ ಕಷ್ಟ ಪರಿಸ್ಥಿತಿ ನಮಗೆ ಹೊಸದಲ್ಲ. ಇಂಥ ಪರಿಸ್ಥಿತಿ ಬಂದಾಗ ಒಂದು ಕಮಿಷನ್ ನೇಮಕ ಮಾಡಬೇಕು, ಎನ್‌ಕ್ವೈರಿ ಆಗಬೇಕು, ಆ ರಿಪೋರ್ಟ್ ಬರಬೇಕು, ಅದರ ಮೇಲೆ ಚರ್ಚೆಯಾಗಬೇಕು, ಆಮೇಲೆ ತೀರ್ಮಾನವಾಗಬೇಕು ಎನ್ನುವುದು ಸರ್ವೇ ಸಾಧಾರಣವಾಗಿದೆ. ತಮಗೆಲ್ಲ ಗೊತ್ತಿರುವ ಹಾಗೆ ಹಿಂದೆ ಕ್ಷಾಮ ಪರಿಸ್ಥಿತಿ ಬಂದಾಗ ಶಾಶ್ವತವಾದ ಪರಿಹಾರ ಕ್ರಮಗಳನ್ನು ಏನೇನು ತೆಗೆದುಕೊಳ್ಳಬೇಕು ಎನ್ನುವುದನ್ನು ಆಗ ಒಂದು ಸಮಿತಿಯವರು ಇಡೀ ಮೈಸೂರು ರಾಜ್ಯದಲ್ಲೆಲ್ಲ ಪ್ರವಾಸ ಮಾಡಿ ಒಂದು ವರದಿಯನ್ನು ಕೊಟ್ಟಿದ್ದಾರೆ. ಆ ವರದಿ ಮೈಸೂರು ಸರ್ಕಾರದಲ್ಲಿದೆ. ತಮ್ಮ ಅಧಿಕಾರಿಗಳಿಗಾದರೂ ಹೇಳಿ, ಆ ರಿಪೋರ್ಟನ್ನು ತೆಗೆದುಕೊಂಡು ಎಲ್ಲೆಲ್ಲಿ ಏನೇನು ಪರಿಹಾರ ಕ್ರಮಗಳನ್ನು, ಶಾಶ್ವತವಾದ ಏನೇನು ಪರಿಹಾರ ಕಾರ್ಯಕ್ರಮಗಳನ್ನು ತೆಗೆದುಕೊಳ್ಳಬೇಕು ಎನ್ನುವುದನ್ನು ನಮೂದಿಸಿದ್ದಾರೆ. ಆ ರೀತಿ ಕಾರ್ಯಕ್ರಮಗಳನ್ನು ತೆಗೆದುಕೊಳ್ಳದೆ ಪುನಃ ಹೊಸದಾಗಿ ಏನೋ ಮಾಡುವುದಕ್ಕೆ ಹೊರಟಿದ್ದೀರಿ. ನಿಜವಾಗಿಯೂ ಕೆಲಸ ಮಾಡಬೇಕೆಂಬ ದೃಷ್ಟಿ ಇದ್ದರೆ ಹೀಗೆ ಮಾಡುತ್ತಿರಲಿಲ್ಲ.

ಶ್ರೀಮಾನ್ ಸಾಠೆಯವರ ನೇತೃತ್ವದಲ್ಲಿ ಒಂದು ಸ್ಟಡಿ ಟೀಂ ಬಂದಾಗ ಒಂದು ಮೆಮೋರಾಂಡಂ ಕೊಟ್ಟಿದ್ದಾರೆ. ಏನು ಕೆಲಸ ಮಾಡಬೇಕು, 64 ಫ್ಯಾಮಿನ್‌ನಲ್ಲಿ ಎಷ್ಟು ಕೆಲಸ ಮಾಡಬೇಕು, ಇರಿಗೇಷನ್ ಮತ್ತು ಅದರ ವರ್ಕ್ಸ್ ಹೀಗೆ ಕೆಲಸಗಳನ್ನು ಮಾಡಬೇಕೆಂದು ಹೇಳುತ್ತ ಹೋಗಿದ್ದಾರೆ. ಇದಕ್ಕೆ ಸಂಬಂಧಪಟ್ಟ ಹಾಗೆ ಅಂಕಿ ಅಂಶಗಳನ್ನು ಒದಗಿಸಿಲ್ಲ. ಎಸ್ಟಿಮೇಟುಗಳನ್ನು ಒದಗಿಸಿಲ್ಲ. ಅದನ್ನೆಲ್ಲ ಒದಗಿಸಿದ್ದರೆ ನಾವು ಸರ್ಕಾರ ಮಾಡಿರುವ ಕೆಲಸಕ್ಕೆ ನಮ್ಮ ಮೆಚ್ಚುಗೆಯನ್ನು ಸೂಚಿಸುತ್ತಿದ್ದೆವು. ಇಷ್ಟು ಕೋಟಿ ರೂಪಾಯಿಗಳ ಅಂದಾಜು ಇದೆ. ಎಷ್ಟು ಹಣ ಖರ್ಚಾಗಿದೆ ಇನ್ನೂ ಇಷ್ಟು ಹಣ ಬೇಕು ಶಾಶ್ವತವಾದ ಪರಿಹಾರ ಕಾರ್ಯಗಳಿಗೆ ಇಷ್ಟು ಕೋಟಿ ರೂಪಾಯಿ ಬೇಕು ಕೇಂದ್ರ ಸರ್ಕಾರಕ್ಕೆ ಎಷ್ಟು ಕೋಟಿ ರೂಪಾಯಿ ಬೇಕಾಗುತ್ತದೆ ಎಂದು ಕೇಳಿದ್ದೀರಿ ? ಎನ್ನುವುದನ್ನು ತಿಳಿಸಿಲ್ಲ. ಒಂದು ಕಮಿಟಿ ಮಾಡಬೇಕು, ಕಮಿಟಿಯವರ ರಿಪೋರ್ಟ್ ಚರ್ಚೆ ಮಾಡಬೇಕು ಕೇಂದ್ರ ಸರ್ಕಾರವನ್ನು ಕೇಳಬೇಕು ಎಂಬುದನ್ನು ಹೇಳುತ್ತಿದ್ದೀರಿ.

ಪರಿಹಾರ ಕಾರ್ಯಗಳನ್ನು ಮಾಡಬೇಕೆಂದು ಎಷ್ಟು ಕಳಕಳಿಯಿಂದ ಭಾಷಣ ಮಾಡುತ್ತಿದ್ದೀರಿ ಅಷ್ಟೇ ಕಳಕಳಿಯಿಂದ ಅದನ್ನು ಕಾರ್ಯತಃ ಮಾಡುತ್ತಿಲ್ಲ ಎನ್ನುವುದು ಇದರಿಂದ ವೇದ್ಯವಾಗುತ್ತದೆ. ಅದಕ್ಕೆ ಒಂದೇ ಒಂದು ಉದಾಹರಣೆಯನ್ನು ಕೊಡುತ್ತೇನೆ. ಹೋದ ವರ್ಷ ಬಾವಿಗಳನ್ನು ತೆಗೆಯುವ ಕಾರ್ಯಕ್ಕೆ ಅಭಿವೃದ್ಧಿ ಬ್ಯಾಂಕುಗಳಿಂದ ಐದು ಕೋಟಿ ರೂಪಾಯಿ ಖರ್ಚು ಮಾಡಿದ್ದೀರಿ. ಈ ವರ್ಷ 1.5 ಕೋಟಿ ರೂಪಾಯಿ ಖರ್ಚು ಮಾಡುವುದಕ್ಕೆ ಆಗುತ್ತಿಲ್ಲ. ಇಂಥ ಪರಿಸ್ಥಿತಿಯಲ್ಲಿ ಸರ್ಕಾರ ಇದೆ.

ಪ್ಲಾನಿಂಗ್ ಕಮಿಷನ್ನಿನ ವೈಸ್ ಚೇರ್‌ಮನ್ ಅವರು ಬಂದಿದ್ದಾಗ ಪುನಃ ಒಂದು ಕಮಿಷನ್ ಬರುತ್ತದೆ, ರಾಜ್ಯಾದ್ಯಂತ ಹೋಗಿ ಅಭಾವ ಪೀಡಿತ ಪ್ರದೇಶಗಳನ್ನು ನೋಡಿಕೊಂಡು ಬರುತ್ತದೆ, ಎಂದು ಹೇಳಿದ್ದಾರೆ, ಅವರ ಮುಂದೆ ನಮ್ಮ ಸರ್ಕಾರದವರು ಎಲ್ಲವನ್ನೂ ತಿಳಿಸುತ್ತಾರೆಂದು ಹೇಳಿದ್ದಾರೆ. ಇಲ್ಲಿಯವರೆಗೂ ಯಾರೂ ಅಭಾವ ಪೀಡಿತ ಪ್ರದೇಶಗಳನ್ನು ನೋಡಿಲ್ಲವೇ ? ಇನ್ನು ಯಾರು ಬಂದು ನೋಡಬೇಕು ? ಹಿಂದಿನವರು ಏನು ರಿಪೋರ್ಟ್ ಕೊಟ್ಟಿದ್ದಾರೆ ಅದರ ಆಧಾರದ ಮೇಲೆ ಕೂಡಲೇ ಶಾಶ್ವತವಾದ ಪರಿಹಾರ ಕಾರ್ಯಗಳನ್ನು ತೆಗೆದುಕೊಳ್ಳಬೇಕು ಎಂದು ನಾನು ಹೇಳುತ್ತೇನೆ. ಮುಖ್ಯವಾಗಿ ಪರಿಹಾರ ಕಾರ್ಯಗಳನ್ನು ತೆಗೆದುಕೊಳ್ಳುವಾಗ ಕುಡಿಯುವ ನೀರಿನ ಬಾವಿಗಳಿಗೆ ಆದ್ಯತೆಯನ್ನು ಕೊಡಬೇಕು.

ಮೂರನೆಯದಾಗಿ ಶ್ರೀಮಾನ್ ದೇವೇಗೌಡರು ಮತ್ತು ಶ್ರೀಮಾನ್ ಅರಸ್‌ರವರು ಹೇಳಿದ ಹಾಗೆ ರೈತರಿಗೆ ಅನುಕೂಲವಾಗುವಂತೆ ನೀರಾವರಿ ಬಾವಿಗಳಿಗೆ ತುಂಬ ಹಣವನ್ನು ಸರ್ಕಾರದವರು ಖರ್ಚು ಮಾಡಬೇಕು. ಇದಕ್ಕೆ ಮೊದಲು ಆದ್ಯತೆ ಕೊಡಿ. ಲಕ್ಷಾಂತರ ರೂಪಾಯಿಗಳನ್ನು ಹಾಕಿ ಖರ್ಚು ಮಾಡುವಂಥ ಕಟ್ಟಡಗಳನ್ನು ನಿಲ್ಲಿಸಿ ರಸ್ತೆಗಳ ರಿಪೇರಿಯನ್ನು ನಿಲ್ಲಿಸಿ, ಇವರು ಆಳುವ

(ಶ್ರೀ ಜಿ. ದುಗ್ಗಪ್ಪ)

ಪಕ್ಷದವರು ಎಂದು ಹಿಂದು ಮುಂದು ನೋಡದೆ, ಇವರು ನಮ್ಮವರು ತಮ್ಮವರು ಎನ್ನುವುದನ್ನು ನೋಡದೆ, ಇವರು ಮಂತ್ರಿಗಳ ಕಡೆಯಿಂದ ಬಂದಿರತಕ್ಕವರು ಎನ್ನುವುದನ್ನೂ ನೋಡದೆ ಎಚ್ಚರಿಕೆಯಿಂದ ಯಾವ ಕೆಲಸ ಅಗತ್ಯವೋ ಅದನ್ನು ಮಾಡಿಸಿ.

ಇನ್ನೊಂದು ವಿಚಾರ ಏನೆಂದರೆ ತಮಗೂ ಗೊತ್ತಿದೆ. ಚಿತ್ರದುರ್ಗ ತಾಲ್ಲೂಕಿನಲ್ಲಿ ಅಭಾವ ಪರಿಸ್ಥಿತಿ ಬಂದು ಜನಗಳು ಕಷ್ಟದಲ್ಲಿರುವಾಗ ಒಬ್ಬ ಮುಖಂಡ ಅಲ್ಲಿ ಪರಿಹಾರ ಕಾಮಗಾರಿ ಕೆಲಸ ಮಾಡಿಸುತ್ತಾ ಇದ್ದೇನೆ ಎಂದು ಒಂದು ಬಿಲ್ ಮಾಡಿಕೊಟ್ಟನು. ರೆವಿನ್ಯೂ ಅಧಿಕಾರಿಗಳು ತನಿಖೆ ಮಾಡಲು ಹೋಗಿ ನೋಡಿದರು, ಕೆಲಸ ಆಗಿರಲಿಲ್ಲ. ಅಲ್ಲಿಯ ಸಬ್‌ಡಿವಿಷನ್ ಅಧಿಕಾರಿಗಳೂ ಸಹ ಹೋಗಿ ನೋಡಿಕೊಂಡು ಬಂದರು, ಕೆಲಸ ಆಗಿರಲಿಲ್ಲ, ಅನಂತರ ಡಿ.ಸಿ.ಗೆ ಒಂದು ವರದಿ ಕೊಟ್ಟರು ಅವರು ಕೇಳಿರತಕ್ಕ ಹಣ ಸಾಧುವಾದುದಲ್ಲ ಎಂದು ಅವರಿಗೆ ಹಣ ಕೊಡುವುದನ್ನು ನಿಲ್ಲಿಸಿದರು. ಆಗ ಅವರು ನೇರವಾಗಿ ಸಂಬಂಧಪಟ್ಟ ಅಧಿಕಾರಿಯನ್ನು ನೋಡಿಕೊಂಡು ಬಂದಿದ್ದೇನೆ. ಬಿಲ್ ಹಣ ಕೊಡಿ ಎಂದು ಕೇಳಿದರು. ಸಂಬಂಧಪಟ್ಟ ಅಧಿಕಾರಿಗಳು ಅವರ ಬಿಲ್ ಏನು ಇದೆಯೋ ಅದನ್ನು ಕೊಟ್ಟುಬಿಡಿ ಎಂದು ಹೇಳಿದರು. ಅದಕ್ಕೆ ಜಿಲ್ಲಾಧಿಕಾರಿಯು ಸರ್ಕಾರ ಆ ರೀತಿ ಆರ್ಡರ್ ಮಾಡಲಿ ಎಂದು ಹೇಳಿದರು. ಇದನ್ನು ನಾವು ಸ್ವತಃ ಕಣ್ಣಾರೆ ನೋಡಿದ ಸಂಗತಿ. ಆ ಮಹನೀಯನು ತಂದು ಕೊಟ್ಟಂಥ ಬಿಲ್‌ಗೆ ಹಣ ಕೊಡದೇ ಇರುವ ಕಾರಣ ಆ ಜಿಲ್ಲೆಯ ಒಬ್ಬ ನಿಷ್ಠಾವಂತ ಅಧಿಕಾರಿಯನ್ನು ಮೂರೂವರೆ ಘಳಿಗೆಯೊಳಗೆ ವರ್ಗಮಾಡಿ ತಮಗೆ ಬೇಕಾದವರನ್ನು, ಆಪ್ತರಾದವರನ್ನು ಕರೆಸಿದರು. ವಾಸ್ತವವಾದ ಸಂಗತಿ ಈ ರೀತಿ ಇದೆ. ನಾನು ಹೆಚ್ಚಿಗೆ ಹೇಳುವುದಕ್ಕೆ ಹೋಗದೇ ಇದ್ದರೂ ಇನ್ನೊಂದು ದೃಷ್ಟಾಂತವನ್ನು ಸಭೆಯ ಮುಂದೆ ಹೇಳುತ್ತೇನೆ. ಬೇರೆ ಕಾಲದಲ್ಲಿ ನೀವು ಯಾವ ರೀತಿಯಾಗಿಯಾದರೂ ಹಣ ದುರುಪಯೋಗ ಮಾಡಿಕೊಳ್ಳಿ, ಆದರೆ ಜನಗಳು ಕಷ್ಟ ಪರಿಸ್ಥಿತಿಯಲ್ಲಿರುವಾಗ ಈ ರೀತಿ ಮಾಡುವುದು ಒಳ್ಳೆಯದಲ್ಲ ಇದು ಸಕಾಲವಲ್ಲ. ಮನೆಗೆ ಬೆಂಕಿ ಹತ್ತಿದಾಗ ಗಳ ಹಿರಿಯುವಂತೆ ಕೆಲಸವನ್ನು ಮಾಡಬೇಡಿ.

ಕೊನೆಯದಾಗಿ ಇನ್ನೊಂದು ವಿಚಾರ ಹೇಳುತ್ತೇನೆ. ಕುಡಿಯುವ ನೀರಿನ ಬಾವಿ ಇಲ್ಲವೆಂದು ನೀವೆಲ್ಲಾ ಕೇಳಿದ್ದೀರಿ. ನಮಗೆ ಹಣದ ಕೊರತೆ ಎಷ್ಟಿದೆ ಎನ್ನುವುದು ಗೊತ್ತಿಲ್ಲವೇ, ಕೇಂದ್ರದಿಂದ ಎಷ್ಟು ನೆರವು ಬರಬೇಕೆಂದು ಗೊತ್ತಿಲ್ಲವೇ ? They say we will calculate the money and let the Central Govt. know about it. ಇದನ್ನು ಕೇಂದ್ರ ಸರ್ಕಾರದವರು ನೋಡಿದರೆ ನಕ್ಕಿರಬೇಕು. ಇಂತಹ ಸ್ಥಿತಿ ಇರುವಾಗ ವಿಧಾನಸೌಧವಲ್ಲದೆ ಮತ್ತೊಂದು ಸಚಿವಾಲಯನ್ನು ಕಟ್ಟುವುದಕ್ಕೆ ಲಕ್ಷಾಂತರ ರೂಪಾಯಿಗಳನ್ನು ಖರ್ಚುಮಾಡುತ್ತಿದ್ದರಲ್ಲ. ಅದಕ್ಕೆ ನಾನಾದರೂ ಹೇಳಬೇಕು ಈವೊತ್ತು ಯಾರು ಬಡವರ ಸೇವೆ ಮಾಡುತ್ತಾರೋ ಅವರಿಗೆ ಒಂದು ಬಾವಿ ತೋಡಿಸಿ. ಒಂದು ಲಕ್ಷ ರೂಪಾಯಿಗಳನ್ನು ಖರ್ಚು ಮಾಡುವಂಥ ಕಟ್ಟಡಗಳನ್ನು ನಿಲ್ಲಿಸಿ ಬಡವರ ಉಪಕಾರಕ್ಕಾಗಿ 100 ಬಾವಿಗಳನ್ನು ತೆಗೆಯಿರಿ. ಪ್ರತಿಯೊಂದು ಕುಡಿಯುವ ನೀರಿನ ಬಾವಿಗೂ 'ಸಚಿವಾಲಯದ ಕುಡಿಯುವ ನೀರಿನ ಬಾವಿ' ಎಂದು ಒಂದು ಬೋರ್ಡ್ ಹಾಕಿಸಿ. ಅದನ್ನು ಬಿಟ್ಟು ಅರ್ಧ ಮೈಮೇಲೆ ಹೊದಿಯಲು ಬಟ್ಟೆಯೇ ಇಲ್ಲದೇ ಇರುವ ಬಡಜನರಿಂದ ವಸೂಲ್ಮಾಡಿದ ಹಣದಿಂದ ಒಂದು ಸಚಿವಾಲಯವನ್ನು ಕಟ್ಟಿಸುವ ಗೋಜಿಗೆ ಹೋಗಬೇಡಿ. ಇದನ್ನು ನಿಲ್ಲಿಸಿ ಎಂದು ಹೇಳಿ ನನಗೆ ನಾಲ್ಕು ಮಾತುಗಳನ್ನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಭಾಷಣವನ್ನು ಮುಗಿಸುತ್ತೇನೆ.

†ಶ್ರೀ ಎಸ್. ರುದ್ರಪ್ಪ (ಚಿತ್ರಾಪುರ).—ಮಾನ್ಯ ಸಭಾಪತಿಗಳೇ, ಮೈಸೂರು ರಾಜ್ಯದಲ್ಲಿ ಉದ್ಭವಿಸಿದಂಥ ಅಭಾವ ತೀವ್ರ ಪರಿಸ್ಥಿತಿಯನ್ನು 3-4 ದಿನದಿಂದಲೂ ಚರ್ಚೆ ಮಾಡುತ್ತಾ ಇದ್ದೇವೆ. ಕೆಲವು ಭಾಗಗಳಲ್ಲಿ ಮಳೆ ಬಂದದ್ದರಿಂದ ರೈತರು ಅಲ್ಲೆಲ್ಲಾ ಒಂದು ಆಸೆಯಿಂದ ಬಿತ್ತನೆಯನ್ನು ಬಿತ್ತಿದರು. ಅನಂತರ ಸಕಾಲಕ್ಕೆ ಮಳೆ ಬಾರದ್ದರಿಂದ ಪೈರೆಲ್ಲಾ ಒಣಗಿಹೋಯಿತು. ಕೂಲಿಗಾರರಿಗೂ ಉದ್ಯೋಗ ಇಲ್ಲದೆ ಒಂದು ಹಳ್ಳಿಯಿಂದ ಇನ್ನೊಂದು ಹಳ್ಳಿಗೆ, ಒಂದು ತಾಲ್ಲೂಕಿನಿಂದ ಇನ್ನೊಂದು ತಾಲ್ಲೂಕಿಗೆ ಹೋಗಲಿಕ್ಕೆ ಹತ್ತಿದರು. ಇನ್ನೂ ಕೆಲವು ಭಾಗಗಳಲ್ಲಿ ಮಳೆ ಬಾರದೆ ಬಿತ್ತನೆ ಬಿತ್ತಲಿಲ್ಲ. ಇದು ಚಿಂತಾಜನಕವಾದ ಪರಿಸ್ಥಿತಿ ಇಂತಹ ಪರಿಸ್ಥಿತಿ ನೋಡಿದರೆ ಯಾವಾಗಲೂ ಬರಗಾಲಕ್ಕೆ ಪೀಡಿತವಾಗುವಂಥ ಪ್ರದೇಶಗಳಲ್ಲಿ ಒಂದು ಶಾಶ್ವತವಾದ ಪರಿಹಾರ ಕಾರ್ಯಕ್ರಮಗಳನ್ನು ಕೈಗೊಳ್ಳಬೇಕಾದುದು ಅವಶ್ಯಕ. ಈ ರೀತಿ ಸರ್ಕಾರದವರು ಯಾವಾಗಲೂ ಬರಗಾಲಕ್ಕೆ ತುತ್ತಾದಂಥ ಪ್ರದೇಶಗಳಲ್ಲೂ ಕೂಡ ತಾತ್ಕಾಲಿಕ ಪರಿಹಾರ ಕಾರ್ಯಗಳನ್ನು

ತೆಗೆದುಕೊಳ್ಳದೆ ಇದ್ದುದು ಇಂತಹ ಗಂಭೀರವಾದ ಪರಿಸ್ಥಿತಿಗೆ ಕಾರಣವಾಯಿತು. ಇನ್ನೂ ಹೆಚ್ಚಿಗೆ ಹೇಳಬೇಕಾದರೆ ಬಿಜಾಪುರ ಮತ್ತು ಗುಲ್ಬರ್ಗ ಜಿಲ್ಲೆಯ ಕೆಲವು ತಾಲ್ಲೂಕುಗಳು ಎಂದರೆ ಷೋಲಾಪುರ, ಜಾವರ್ಗಿ ಮತ್ತು ರಾಯಚೂರು ಜಿಲ್ಲೆಯ ದೇವದುರ್ಗ, ಕುಷ್ಟಗಿ ಇನ್ನೂ ಮುಂತಾದ ತಾಲ್ಲೂಕುಗಳು ಸದಾಕಾಲದಲ್ಲಿಯೂ ಬರಗಾಲಕ್ಕೆ ಪೀಡಿತವಾದಂಥ ಪ್ರದೇಶಗಳಾಗಿವೆ. ಅಂತಹ ಕಡೆ ಶಾಶ್ವತವಾದ ಪರಿಹಾರ ಕಾರ್ಯಕ್ರಮಗಳನ್ನು ಕೈಗೊಳ್ಳಬೇಕೆಂದು ಈಗಾಗಲೇ ಹೇಳಿದ್ದೇನೆ. ಈಗ ಅಪ್ಪರ್‌ಕೃಷ್ಣಾ ಯೋಜನೆಯನ್ನು ಕೈಗೊಳ್ಳಬೇಕೆಂದು ನಿರ್ಣಯ ಮಾಡಿದ್ದಾರೆ. ಅದನ್ನು ಈಗಲೇ ಪ್ರಾರಂಭ ಮಾಡಬೇಕು. ಅಣೆಕಟ್ಟುಗಳನ್ನು ಡ್ಯಾಮ್‌ಗಳನ್ನು ಕಟ್ಟುವುದು ಒಂದು ಕಡೆ ಇರಲಿ, ಈಗ ಅಪ್ಪರ್‌ಕೃಷ್ಣಾ ಪ್ರಾಜೆಕ್ಟ್ ಯೋಜನೆಯನ್ನು ತೆಗೆದುಕೊಂಡು ಲೆಫ್ಟ್ ಅಂಡ್‌ರೈಟ್ ಬ್ಯಾಂಕ್ ಕೆನಾಲನ್ನು ಪ್ರಾರಂಭ ಮಾಡಿದರೆ ಎಷ್ಟೋ ಜನ ಕೂಲಿಗಾರರಿಗೆ ಉದ್ಯೋಗ ಕಲ್ಪಿಸಿದಂತಾಗುತ್ತದೆ. ಮೈಸೂರು ರಾಜ್ಯದಲ್ಲಿ ಸದಾಕಾಲದಲ್ಲೂ ಬರಗಾಲಕ್ಕೆ ತುತ್ತಾಗಿರುವಂತ ಪ್ರದೇಶಗಳಲ್ಲಿ ಒಂದು ಶಾಶ್ವತವಾದ ಪರಿಹಾರ ಕಾರ್ಯಗಳನ್ನು ಕೈಗೊಳ್ಳಬೇಕು, ಕೋಲಾರದಲ್ಲಾಗಲೀ ಚಿತ್ರದುರ್ಗದಲ್ಲಾಗಲೀ ಅಥವಾ ಯಾವ ಭಾಗವೇ ಆಗಲೀ ಇಂತಹ ಕಾರ್ಯವನ್ನು ಕೈಗೊಂಡರೆ ಇಷ್ಟೊಂದು ಭಯಂಕರವಾದ ಪರಿಸ್ಥಿತಿಗೆ ಬರುವುದಿಲ್ಲ ಎಂದು ನನಗೆ ಅನಿಸುತ್ತದೆ. ಈ ರೀತಿ ಜನಗಳಿಗೆ ಅನುಕೂಲ ಮಾಡಿಕೊಡಬೇಕೆಂದು ನಾನು ಹೇಳುತ್ತೇನೆ.

ಇನ್ನು ಕೆಲವು ಭಾಗಗಳಲ್ಲಿ ಈ ವರ್ಷ ಮಳೆ ಬಾರದೇ ಇದ್ದುದರಿಂದ ಬಹಳ ಜನರು ಕಂಗಾಲಾಗಿದ್ದಾರೆ. ಗುಲ್ಬರ್ಗದಲ್ಲಿ ಕೆಲವು ಭಾಗಗಳು, ರಾಯಚೂರಿನಲ್ಲಿ ಕೆಲವು ಭಾಗಗಳಲ್ಲಿ ಯಾವಾಗಲೂ ಮಳೆ ಬರುತ್ತಿತ್ತು. ಈ ಸಾರಿ ಅಲ್ಲೂ ಸಹ ಸರಿಯಾಗಿ ಮಳೆ ಬಾರದೆ ಜನರ ಸ್ಥಿತಿ ಚಿಂತಾಜನಕವಾಗಿದೆ. ನಾನು ಒಂದು ಸಲಹೆ ಮಾಡುವುದು ಏನೆಂದರೆ ಈಗಾಗಲೇ ಈ ಬಡ್ಜೆಟ್ಟಿನಲ್ಲಿ ಕೆಲವು ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದೀರಿ. ರಸ್ತೆಗಳನ್ನು ನಿರ್ಮಾಣ ಮಾಡುವುದು ಮತ್ತು ಕೆರೆಗಳನ್ನು ಕಟ್ಟುವುದು ಮುಂತಾದ ಏನು ಒಂದು ಕಾರ್ಯಕ್ರಮವನ್ನು ಹಾಕಿಕೊಂಡಿದ್ದೀರೋ, ಅವುಗಳನ್ನು ತೀವ್ರವಾಗಿ ಪ್ರಾರಂಭ ಮಾಡಬೇಕು. ಟೆಕ್ನಿಕಲ್ ಸ್ಯಾಂಕ್ಷನ್ ಆಗಿಲ್ಲ, ಎಸ್ಟಿಮೇಟ್ ತಯಾರ್ಮಾಡಬೇಕು ಎನ್ನುವ ಗೋಜಿಗೆ ಹೋಗದೆ ಅಲ್ಲಿಯ ಅಧಿಕಾರಿಗಳಿಗೆ ಅಪ್ಪಣೆ ಕೊಟ್ಟು ಈ ಬಡ್ಜೆಟ್ಟಿನಲ್ಲಿ ಏನು ಒಂದು ಹಣವನ್ನು ಒದಗಿಸಿದ್ದೀರೋ ಅದನ್ನು ತ್ವರಿತವಾಗಿ ಕಾರ್ಯಗತವಾಗುವಂತೆ ಮಾಡಬೇಕೆಂದು ನಾನು ಸೂಚಿಸುತ್ತೇನೆ. ಆ ರೀತಿ ಮಾಡಿದರೆ ಈಗ ಕ್ಷಾಮ ಪರಿಸ್ಥಿತಿ ಏನು ಇದೆಯೋ ಅದು ನಿವಾರಣೆ ಆಗಲು ಅವಕಾಶವಾದಂತಾಗುತ್ತದೆ.

1-00 P.M.

ಈ ವರ್ಷದ ಬಜೆಟನ್ನು ನೋಡುವುದಾದರೆ ಸುಮಾರು ಎರಡು ಕೋಟಿ ರೂಪಾಯಿ ಕಟ್ಟಡಗಳನ್ನು ಕಟ್ಟುವುದಕ್ಕೆ ಎಂದು ಇಟ್ಟಿದ್ದಾರೆ. ಅದು ಗುಲ್ಬರ್ಗದ ಸೈನಿಕ ಕಾಲೇಜಿಗೆ ಅಥವಾ ಇನ್ನಿತರ ಕಟ್ಟಡಗಳಿಗೆ ಬರಬಹುದು. ಅವುಗಳನ್ನು ಮುಂದೆ ಹಾಕಿ, ಈ ಹಣವನ್ನು ಫ್ಯಾಮಿನ್ ರಿಲೀಫ್ ಕೆಲಸಗಳಿಗೋಸ್ಕರ ಉಪಯೋಗ ಮಾಡಿದರೆ ಎಷ್ಟೋ ಅನುಕೂಲವಾಗುತ್ತದೆಂದು ನಾನು ತಿಳಿದಿದ್ದೇನೆ. ಆದ್ದರಿಂದ ಈ ಕಟ್ಟಡಗಳನ್ನು ಕಟ್ಟುವುದನ್ನು ಬಂದು ಮಾಡಿ, ಇಂಥ ಬರಗಾಲದ ಕೆಲಸಗಳಿಗೆ ಉಪಯೋಗಿಸುವುದು ಸೂಕ್ತವೆಂದು ಹೇಳುತ್ತೇನೆ. ಇನ್ನೊಂದು ವಿಷಯವೇನೆಂದರೆ ಎಲ್ಲಾ ಮಾನ್ಯ ಸದಸ್ಯರುಗಳು, ಬತ್ತಿಹೋದಂತಹ ಬಾವಿಗಳನ್ನು ಆಳ ಮಾಡಿಸಿ, ಉಪಯೋಗವಾಗುವ ಹಾಗೆ ಮಾಡಬೇಕು, ಬೋರಿಂಗ್ ಮೇಶೀನ್ ಒದಗಿಸಬೇಕು ಎಂದು ಎಲ್ಲಾ ಹೇಳಿದರು. ಈ ರೀತಿ ಎಲ್ಲಾ ತಾಲ್ಲೂಕುಗಳಲ್ಲಿ ಒದಗಿಸಿ, ಬಾವಿಗಳಲ್ಲಿ ನೀರು ಬರುವಂತೆ ಮಾಡಿದರೆ ರೈತರಿಗೆ ಬಹಳ ಅನುಕೂಲವಾಗುತ್ತದೆ ಎಂದು ಕೂಡ ಹೇಳಿದ್ದಾರೆ. ಆದ್ದರಿಂದ ತೀವ್ರವಾಗಿ ಬೋರಿಂಗ್ ಮೇಶಿನ್ಸ್, ಬ್ಲಾಸ್ಟಿಂಗ್ ಮೇಶಿನ್ಸ್ ಪ್ರತಿಯೊಂದು ತಾಲ್ಲೂಕುಗಳಿಗೆ ಒದಗಿಸುವುದಾದರೆ, ರೈತರಿಗೆ ಅನುಕೂಲವಾಗುತ್ತದೆಂದು ಹೇಳುತ್ತೇನೆ. ಕೆಲವು ಪ್ರದೇಶಗಳಲ್ಲಿ ಮೇಜರ್ ಇರಿಗೇಷನ್ ಪ್ರೊಜೆಕ್ಟ್‌ಗಳ, ಅಥವಾ ಮಧ್ಯಮ ತರದ ಪ್ರೊಜೆಕ್ಟ್‌ಗಳ ತೆಗೆದುಕೊಂಡಿಲ್ಲ. ಉದಾಹರಣೆಗೆ ಗುಲ್ಬರ್ಗ ಜಿಲ್ಲೆಯಲ್ಲಿ ಭೀಮ ನದಿ ಇದೆ. ಅಲ್ಲಿ ಯಾವ ತರದ ಲಿಫ್ಟ್ ಇರಿಗೇಶನ್ನೂ ಇಲ್ಲ. ಆದ್ದರಿಂದ ಈ ಪರಿಸ್ಥಿತಿಯನ್ನು ಎದುರಿಸಬೇಕಾದರೆ, ಭೀಮಾ ನದಿಯ ದಡದಲ್ಲಿ ಲಿಫ್ಟ್ ಇರಿಗೇಷನ್ ಮಂಜೂರು ಮಾಡಿದ್ದಾದರೆ, ರೈತರಿಗೆ ಅನುಕೂಲವಾಗುತ್ತದೆ ಮತ್ತು ಜನರಿಗೆ ಉದ್ಯೋಗ ಕೂಡ ಸಿಗುತ್ತದೆ. ಕೆಲವು ಕಡೆಗಳಲ್ಲಿ ಈಗಾಗಲೇ ಪರಿಹಾರ ಕಾರ್ಯಗಳನ್ನು ಒದಗಿಸಿದ್ದಾರೆ. ಆದರೆ ಜನರಿಗೆ ಕೆಲವು ಕಡೆ ಹಣ ಬೇಕಾಗಿಲ್ಲ. ಅವರಿಗೆ ಆಹಾರ ಬೇಕೆಂದು ಕೇಳುತ್ತಿದ್ದಾರೆ. ಆದ್ದರಿಂದ ಈಗ ಸರ್ಕಾರದವರು ಕೇಂದ್ರ ಸರ್ಕಾರಕ್ಕೆ 10 ಸಾವಿರ ಟನ್ ಮಿಲೋ ಬೇಕು ಎಂದು ಕೇಳುತ್ತಿದ್ದಾರೆ. ಅದನ್ನು

(ಶ್ರೀ ಎಸ್. ರುದ್ರಪ್ಪ)

ಇನ್ನೂ ಅಧಿಕ ಪ್ರಮಾಣದಲ್ಲಿ ಆಹಾರಧಾನ್ಯ ತೆಗೆದುಕೊಂಡು ಪ್ರತಿ ಹಳ್ಳಿಗಳಲ್ಲೂ ಯಾವ ಬೇಡಿಕೆ ಇದೆ, ಅದನ್ನು ಕೊಡಬೇಕೆಂದು ಹೇಳುತ್ತೇನೆ. ಕೆಲವು ಸದಸ್ಯರು ಪರಿಹಾರ ಕಾರ್ಯಕ್ರಮಗಳನ್ನು ಪ್ರತಿಯೊಂದು ತಾಲ್ಲೂಕುಗಳಲ್ಲೂ ತಾಲ್ಲೂಕು ಬೋರ್ಡಿಗೆ ವಹಿಸಿಕೊಡಬಾರದು, ಬೇರೆ ಏಜೆನ್ಸಿ ಮುಖಾಂತರ ಮಾಡಿಸಬೇಕೆಂದು ಹೇಳಿದರು. ಈಗಾಗಲೇ ಪ್ರತಿಯೊಂದು ತಾಲ್ಲೂಕಿನಲ್ಲೂ ಒಂದು ಕಮಿಟಿ ಇದೆ. ಕಮಿಟಿ ಕನ್‌ವೀನರ್ ಅಲ್ಲಿ ಅಸಿಸ್ಟೆಂಟ್ ಕಮಿಷನರ್ ಇದ್ದಾರೆ. ಆಯಾ ಭಾಗದ ತಾಲ್ಲೂಕು ಬೋರ್ಡು ಅಧ್ಯಕ್ಷರು ಮತ್ತು ಸದಸ್ಯರು ಅದರಲ್ಲಿದ್ದಾರೆ. ಅದರಲ್ಲಿ ಈಗಾಗಲೇ ಕೆಲಸಗಳು ನಡೆದಿವೆ. ಆದ್ದರಿಂದ ಈ ಕಾರ್ಯಕ್ರಮಗಳನ್ನು ಬೇರೆ ಏಜೆನ್ಸಿಗೆ ವಹಿಸಿಕೊಡುವುದು ಸಾಧ್ಯವಿಲ್ಲ. ಈಗ ಇದ್ದಂತಹ ಕಮಿಟಿಗಳು, ಆ ಕೆಲಸಗಳನ್ನು ದಕ್ಷತೆಯಿಂದ, ಶ್ರದ್ಧೆಯಿಂದ ಮಾಡಿದ್ದಾದರೆ, ಜನರಿಗೆ ಬಂದಂತಹ ಕಷ್ಟ ಸ್ವಲ್ಪ ನೀಗಬಹುದು ಎಂದು ನನಗನಿಸುತ್ತದೆ. ಇಷ್ಟು ಮಾತನಾಡಲು ಅವಕಾಶ ಕೊಟ್ಟಂತಹ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

Mr. **DEPUTY SPEAKER.**—The House will now adjourn and meet again on Monday, the 9th September 1968 at 12-00 Noon.

The House adjourned at Five Minutes past One of the Clock to meet again at Twelve of the Clock on Monday, the 9th September 1968.

WD 11303—GPB—600—31 10 1968